# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
# ಬೆಂಗಳೂರು

## ಹೆಚ್.ಆರ್.ಸಿ.ಸಂಖ್ಯೆ: 3980/10/12/2018(B-3)
## ದಿನಾಂಕ:29/07/2021
## ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು

**ದೂರುದಾರರು:**

**ವಿದ್ಯಾಶ್ರೀ,**
**ಬಿನ್ ಈಶ್ವರಪ್ಪ,**
**ಹಂದ್ರಾಳು ಗ್ರಾಮ,**
**ಜಾವಗಲ್ ಹೋಬಳಿ,**
**ಅರಸೀಕೆರೆ ತಾಲ್ಲೂಕು,**
**ಹಾಸನ ಜಿಲ್ಲೆ.**

## ಆದೇಶ

ಶ್ರೀಮತಿ ವಿದ್ಯಾಶ್ರೀ ರವರು ಆಯೋಗಕ್ಕೆ ಸಲ್ಲಿಸಿದ ದೂರಿನಲ್ಲಿ, ಹಾರ್ನಹಳ್ಳಿ ವಾಸಿಯಾದ ಶ್ರೀ ಶಿವಾನಂದ ರವರ ಮನೆಯವರು ದೂರುದಾರರ ಜೊತೆಯಲ್ಲಿ ಅವರ ತಂದೆ ಇಲ್ಲವೆಂದು ತಿಳಿದು ಅವರ ಬಳಿ ಇದ್ದ ಆಸ್ತಿಯನ್ನು ಪಡೆಯಲು ಅಪ್ರಾಪ್ತ ವಯಸ್ಕಳಾದ ದೂರುದಾರರನ್ನು 2013 ಆಗಸ್ಟ್ 15 ರಂದು ಜಾವಗಲ್‌ನಿಂದ ಅಪಹರಣ ಮಾಡಿ ಯಡೆಯೂರು ದೇವಸ್ಥಾನ ಬಳಿ ಇರುವ ಒಂದು ಜಾಗಕ್ಕೆ ಕರೆದುಕೊಂಡು ಹೋಗಿ ದೂರುದಾರರಿಗೆ ಇಷ್ಟವಿಲ್ಲದಿದ್ದರೂ ಸಹ ಅವರನ್ನು ಹೆದರಿಸಿ ಬೆದರಿಸಿ ಮದುವೆ ಮಾಡಿಕೊಂಡು ದಿನಾಂಕ: 28.03.2013 ರಂದು ಅವರ ಬಳಿ ಯಾವುದೋ ಒಂದು ಪತ್ರಕ್ಕೆ ಸಹಿ ಹಾಕಿಸಿಕೊಂಡು ವಿವಾಹ ನೊಂದಣಿ ಮಾಡಿಸಿರುತ್ತಾರೆ. ಈ ವಿಚಾರವನ್ನು ದೂರುದಾರರು ಅವರ ತಂದೆ ತಾಯಿಗೂ ಸಹ ತಿಳಿಸದೇ ಇದ್ದು, ಶಿವಾನಂದನು ಆಗಾಗ್ಗೆ ಫೋನ್ ಮಾಡಿ ದೂರುದಾರರನ್ನು ಹೆದರಿಸಿ ಬೆದರಿಸಿ, ಅವರ ಬಳಿ ಕೂಡಿಟ್ಟುಕೊಂಡಿದ್ದ ರೂ.9,44,000/- ಹಣ ಮತ್ತು 50-60 ಗ್ರಾಂ ಚಿನ್ನದ ಒಡವೆಯನ್ನು ತೆಗೆದುಕೊಂಡಿರುತ್ತಾರೆ. ಈ ಬಗ್ಗೆ ದೂರುದಾರರ ಬಳಿ ರೂ.5,00,000/- ಹಣವನ್ನು ಶಿವಾನಂದನಿಗೆ ನೀಡಿರುವುದಕ್ಕೆ ಬ್ಯಾಂಕ್ ದಾಖಲಾತಿಯನ್ನು ಹೊಂದಿರುತ್ತಾರೆಂದು, ಈ ವಿಚಾರ ಅವರ ತಂದೆ ತಾಯಿಗೆ ಗೊತ್ತಾಗಿ, ಜಾವಗಲ್ ಆರಕ್ಷಕ ಠಾಣೆಗೆ ದೂರು ನೀಡಲು ಹೋದಾಗ ಠಾಣೆಯಲ್ಲಿದ್ದ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ಮತ್ತು ಶ್ರೀ ಚೆಲುವ ಮೂರ್ತಿ, ಎ.ಎಸ್.ಐ ರವರು ದೂರನ್ನು ಸ್ವೀಕರಿಸಿ ದೂರು ದಾಖಲಿಸಿಕೊಳ್ಳದೇ, ತಡವಾಗಿ ದೂರು ದಾಖಲಿಸಿಕೊಂಡಿದ್ದು, ಪ್ರಕರಣದಲ್ಲಿ ಸರಿಯಾದ

ತನಿಖೆ ನಡೆಸದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಸದರಿ ಪೊಲೀಸ್ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ದೂರುದಾರರಿಗೆ ರಕ್ಷಣೆ ಮತ್ತು ನ್ಯಾಯ ಒದಗಿಸುವಂತೆ ಕೋರಿದ್ದಾರೆ.

ದೂರರ್ಜಿಯ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಆಯೋಗದ ಎ.ಡಿ.ಜಿ.ಪಿ. ರವರಿಗೆ ಆದೇಶಿಸಿದ್ದು, ಅದರಂತೆ ದಿನಾಂಕ.16.09.2019ರ ಪತ್ರದ ಅನ್ವಯ ವರದಿ ಸಲ್ಲಿಸಿದ್ದು, ಅದರೊಂದಿಗೆ ಆಯೋಗದ ಡಿವೈ.ಎಸ್.ಪಿ ರವರ ವರದಿ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಹೇಳಿಕೆಗಳು ಹಾಗೂ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಈ ಪ್ರಕರಣದಲ್ಲಿ ಅಪ್ರಾಪ್ತ ವಯಸ್ಕಳಾದ ಅರ್ಜಿದಾರರನ್ನು ಹಾರ್ನಹಳ್ಳಿ ಶಿವಾನಂದನು ಅಪಹರಿಸಿಕೊಂಡು ಹೋಗಿ ದಿನಾಂಕ: 15.08.2013 ರಂದು ಬಲವಂತವಾಗಿ ಹೆದರಿಸಿ ಬೆದರಿಸಿ ಮದುವೆ ಮಾಡಿಕೊಂಡಿದ್ದು, ದಿನಾಂಕ: 23.08.2013 ರಂದು ಅರಸೀಕೆರೆ ಸಬ್ ರಿಜಿಸ್ಟಾರ್ ಆಫೀಸ್‌ನಲ್ಲಿ ವಿವಾಹ ನೊಂದಣಿ ಮಾಡಿಸಿರುತ್ತಾರೆ ಎಂದು ಆಪಾದಿಸಲಾಗಿದೆ.

ಅರ್ಜಿದಾರರಾದ ವಿದ್ಯಾಶ್ರೀ ರವರಿಗೆ ಸಂಬಂಧಿಸಿದಂತೆ ಆಸ್ಪತ್ರೆ ದಾಖಲಾತಿ ಹಾಗೂ ಶಾಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಸ್ಪತ್ರೆ ದಾಖಲಾತಿಗಳಲ್ಲಿ ಅರ್ಜಿದಾರರಾದ ವಿದ್ಯಾಶ್ರೀ ರವರ ಜನ್ಮ ದಿನಾಂಕ: 18.01.1996 ಎಂದು ನಮೂದಿಸಿದ್ದು, ಶಾಲಾ ದಾಖಲಾತಿಗಳ ಶಾಲಾ ವರ್ಗಾವಣೆ ಪತ್ರದಲ್ಲಿ ವಿದ್ಯಾಶ್ರೀ ರವರ ಜನ್ಮ ದಿನಾಂಕ: 18.06.1995 ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ. ಆಸ್ಪತ್ರೆಯ ದಾಖಲಾತಿ ಪ್ರಕಾರ ಅರ್ಜಿದಾರರ ಮದುವೆ ದಿನಾಂಕಕ್ಕೆ ಆಕೆಯ ವಯಸ್ಸು 17 ವರ್ಷ 07 ತಿಂಗಳು ಹಾಗೂ ಶಾಲಾ ದಾಖಲಾತಿ ಪ್ರಕಾರ ಅರ್ಜಿದಾರರ ಮದುವೆ ದಿನಾಂಕಕ್ಕೆ ಆಕೆಯ ವಯಸ್ಸು 18 ವರ್ಷ 02 ತಿಂಗಳಾಗಿದ್ದು, ಮೇಲ್ಕಂಡ ದಾಖಲಾತಿಗಳ ಪ್ರಕಾರ ಅರ್ಜಿದಾರರ ಜನ್ಮ ದಿನಾಂಕದಲ್ಲಿ ವ್ಯತ್ಯಾಸಕಂಡು ಬಂದಿರುತ್ತದೆ. ಶಾಲಾ ದಾಖಲಾತಿ ಪ್ರಕಾರ ಅರ್ಜಿದಾರರ ವಿವಾಹ ನೊಂದಣಿ ದಿನಾಂಕಕ್ಕೆ ಅರ್ಜಿದಾರರಾದ ವಿದ್ಯಾಶ್ರೀ ರವರಿಗೆ 18 ವರ್ಷ ತುಂಬಿರುವುದು ಕಂಡು ಬಂದಿರುತ್ತದೆ.

ಅರ್ಜಿದಾರರಾದ ವಿದ್ಯಾಶ್ರೀ ರವರು ಶಿವಾನಂದ ತನ್ನನ್ನು ಅಪರಹರಿಸಿಕೊಂಡು ಹೋಗಿ ಬಲವಂತವಾಗಿ ಮದುವೆಯಾಗಿದ್ದು, ತನಗೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಮಾನಸಿಕ ಹಿಂಸೆ ನೀಡಿದ್ದು, ತನ್ನನ್ನು ಮದುವೆಯಾಗಿರುವ ವಿಚಾರವನ್ನು ಯಾರಿಗೂ ತಿಳಿಸದಂತೆ ಹಾಗೂ ತನ್ನ ತಂದೆಯನ್ನು ಸಾಯಿಸುವುದಾಗಿ ಕೊಲೆ ಬೆದರಿಕೆ ಹಾಕಿದ್ದು, ತನ್ನ ಬಳಿ ಇದ್ದ ಹಣ ಒಡವೆಗಳನ್ನು ಬಲವಂತವಾಗಿ ತೆಗೆದು ಕೊಂಡಿರುತ್ತಾರೆಂದು ಆಪಾದಿಸಿದ್ದು, ಈ ಬಗ್ಗೆ ಶಿವಾನಂದ ರವರು ವಿಚಾರಣಾ ಕಾಲದಲ್ಲಿ ನೀಡಿದ ಹೇಳಿಕೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶಿವಾನಂದನು ಅರ್ಜಿದಾರರಾದ ವಿದ್ಯಾಶ್ರೀ ರವರ ತಂದೆ

ಮನೆ ಬಿಟ್ಟು ಹೋದ ಮೇಲೆ ಅವರ ಮನೆಯವರೊಂದಿಗೆ ಉತ್ತಮ ಒಡನಾಟ ಹೊಂದಿದ್ದು, ಅರ್ಜಿದಾರರಾದ ವಿದ್ಯಾಶ್ರೀ ಹಾಗೂ ಶಿವಾನಂದ ರವರು ಪರಸ್ಪರ ಪ್ರೀತಿಸುತ್ತಿದ್ದು, ಆಕೆಗೆ 18 ವರ್ಷ ಆದ ನಂತರ ಆಕೆಯ ತಾಯಿಯ ಒಪ್ಪಿಗೆ ಪಡೆದು ಮದುವೆಯಾಗಿದ್ದು, ಆಕೆಯ ತಂದೆ ಮಾಡಿದ್ದ ಸಾಲವನ್ನು ತಾನೇ ತೀರಿಸಿರುವುದಾಗಿ ತಿಳಿಸಿರುತ್ತಾರೆ. ಅರ್ಜಿದಾರರಾದ ವಿದ್ಯಾಶ್ರೀ ರವರೊಂದಿಗೆ ಶಿವಾನಂದ ಅನ್ಯೋನ್ಯವಾಗಿ ಜೀವನ ಮಾಡಿಕೊಂಡಿದ್ದು, ಆಕೆ ಶಿವಾನಂದನಿಂದ ಗರ್ಭಿಣಿಯಾಗಿದ್ದು, ಗರ್ಭಪಾತ ಮಾಡಿಸಿರುತ್ತಾಳೆ ಎಂದು ತಿಳಿಸಿದ್ದು, ಈ ಬಗ್ಗೆ ಯಾವುದೇ ವೈದ್ಯಕೀಯ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಹಾಗೂ ಶಿವಾನಂದನು ವಿಚಾರಣಾ ಕಾಲದಲ್ಲಿ ಹಾಜರಪಡಿಸಿದ ಫೋಟೋ ಪ್ರತಿಗಳನ್ನು ಪರಿಶೀಲಿಸಲಾಗಿ ಅರ್ಜಿದಾರರಾದ ವಿದ್ಯಾಶ್ರೀ ಹಾಗೂ ಶಿವಾನಂದರವರು ಚಿರಪರಿಚಿತರಾಗಿದ್ದು, ವಿದ್ಯಾಶ್ರೀ ರವರು ಶಿವಾನಂದ ಹಾಗೂ ಅವರ ಕುಟುಂಬದವರೊಂದಿಗೆ ಪರಸ್ಪರ ಹೊಂದಾಣಿಕೆಯಿಂದ ಇರುವುದು ಕಂಡು ಬಂದಿದ್ದು, ಅರ್ಜಿದಾರರಾದ ವಿದ್ಯಾಶ್ರೀ ರವರು ಶಿವಾನಂದನೊಂದಿಗೆ ಬಲವಂತದಿಂದ ಮದುವೆ ಆಗಿರುವಂತೆ ಕಂಡು ಬಂದಿರುವುದಿಲ್ಲ.

ಹಾರ್ನಹಳ್ಳಿ ಶಿವಾನಂದನು ಅಪ್ರಾಪ್ತ ವಯಸ್ಕಳಾದ ಅರ್ಜಿದಾರರನ್ನು ದಿನಾಂಕ: 14.08.2013 ರಂದು ಅಪಹರಿಸಿಕೊಂಡು ಯಡೆಯೂರಿಗೆ ಕೆರೆದುಕೊಂಡು ಹೋಗಿದ್ದು, ಅಲ್ಲಿದ್ದ ಅವರ ಕುಟುಂಬದವರು ತನಗೆ ಹೊಡೆದು ಹೆದರಿಸಿ ಬೆದರಿಸಿ, ದಿನಾಂಕ: 15.08.2013 ರಂದು ಆಕೆಗೆ ಬಲವಂತವಾಗಿ ಶಿವಾನಂದನೊಂದಿಗೆ ಮದುವೆ ಮಾಡಿಸಿರುತ್ತಾರೆಂದು 2015ನೇ ಸಾಲಿನಲ್ಲಿ ಜಾವಗಲ್ ಆರಕ್ಷಕ ಠಾಣೆಗೆ ದೂರು ನೀಡಲು ಹೋದಾಗ, ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಿ.ಎಸ್.ಐ ಶ್ರೀ ರಾಘವೇಂದ್ರ ರವರು ಅರ್ಜಿದಾರರ ದೂರನ್ನು ಸ್ವೀಕರಿಸದೇ ನಿರ್ಲಕ್ಷ್ಯತೆ ತೋರಿದ್ದು, ಶಿವಾನಂದರೊಂದಿಗೆ ರಾಜೀ ಮಾಡಿಕೊಳ್ಳಲು ಒತ್ತಾಯ ಪಡಿಸಿರುವುದು ಅರ್ಜಿದಾರರಾದ ವಿದ್ಯಾಶ್ರೀ ಹಾಗೂ ಅವರ ತಂದೆ ತಾಯಿಯವರ ಹೇಳಿಕೆಯಿಂದ ಕಂಡು ಬಂದಿರುತ್ತದೆ.

ದಿನಾಂಕ: 08.11.2015 ರಂದು ಹಾಸನ ಜಿಲ್ಲೆಯ ಎಸ್.ಪಿ ರವರನ್ನು ಭೇಟಿ ಮಾಡಿದ ನಂತರ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ರವರು ದಿನಾಂಕ: 10.11.2015 ರಂದು ಬೆಳಿಗ್ಗೆ 10.45 ಗಂಟೆಗೆ ವಿದ್ಯಾಶ್ರೀ ರವರ ದೂರನ್ನು ಸ್ವೀಕರಿಸಿ, ಠಾಣಾ ಮೊ.ಸಂಖ್ಯೆ: 185/2015 ರೀತ್ಯಾ ಪ್ರಕರಣ ದಾಖಲಿಸಿದ್ದು, ಅಪ್ರಾಪ್ತ ವಯಸ್ಸಿನವರಾದ ಅರ್ಜಿದಾರರನ್ನು ಅಪಹರಿಸಿಕೊಂಡು ಹೋಗಿ ಬಲವಂತವಾಗಿ ಮದುವೆ ಮಾಡಿಕೊಂಡಿರುವ ಬಗ್ಗೆ ಅರ್ಜಿದಾರರು ಅವರ ದೂರಿನಲ್ಲಿ ನಮೂದಿಸಿದ್ದಾಗಿಯೂ ಸಹ, ಪಿ.ಎಸ್.ಐ ಶ್ರೀ ರಾಘವೇಂದ್ರ ರವರು ಸದರಿ ಎಫ್.ಐ.ಆರ್ ನಲ್ಲಿ ಕಲಂ 366(ಎ) ಐಪಿಸಿ ಕಲಂ ಅಳವಡಿಸದೇ, ಕಲಂ

341, 342, 323, 504, 506, 498 (ಎ) ರೆ/ವಿ 34 ಐಪಿಸಿ ರೀತ್ಯಾ ಕಲಂಗಳನ್ನು ಅಳವಡಿಸಿದ್ದು, ಪ್ರಕರಣದಲ್ಲಿ ಸರಿಯಾದ ತನಿಖೆ ನಡೆಸದೇ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದು, ಸಿ.ಸಿ ನಂ. 3094/2016 ರಲ್ಲಿ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವುದು ಕಂಡು ಬಂದಿರುತ್ತದೆ.

ಅರ್ಜಿದಾರರಾದ ವಿದ್ಯಾಶ್ರೀ ರವರು ಜಾವಗಲ್ ಪೊಲೀಸ್ ಠಾಣೆಯಲ್ಲಿ ನೀಡಿದ ದೂರಿನಲ್ಲಿ ತಾನು ಅಪ್ರಾಪ್ತ ವಯಸ್ಕಳಾಗಿದ್ದು, ತನ್ನನ್ನು ಅಪಹರಿಸಿಕೊಂಡು ಹೋಗಿ ಬಲವಂತದಿಂದ ಮದುವೆ ಮಾಡಿರುತ್ತಾರೆ ಎಂದು ನಮೂದಿಸಿದ್ದು, ಜಾವಗಲ್ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ರವರು ತನಿಖಾ ಕಾಲದಲ್ಲಿ ಅರ್ಜಿದಾರರ ದೂರು ಪ್ರತಿಯನ್ನು ಪರಿಶೀಲಿಸದೇ ಹಾಗೂ ಅರ್ಜಿದಾರರ ಅಪ್ರಾಪ್ತ ವಯಸ್ಸಿನ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ, ದೃಢಪಡಿಸಿಕೊಂಡು ಘಟನೆಗೆ ಸಂಬಂಧಪಟ್ಟ ಕಲಂಗಳನ್ನು ಅಳವಡಿಸದೇ ಹಾಗೂ ಪ್ರಕರಣದಲ್ಲಿ ಸರಿಯಾದ ತನಿಖೆ ನಡೆಸದೇ ನಿರ್ಲಕ್ಷ್ಯತೆ ತೋರಿರುವುದು ಹಾಗೂ ಒಬ್ಬ ಅಪ್ರಾಪ್ತ ಬಾಲಕಿಯ ಬಗ್ಗೆ ನಿಷ್ಕಾಳಜಿತನ ತೋರಿರುವುದು ವಿಚಾರಣಾ ಕಾಲದಲ್ಲಿ ಪಡೆದ ಹೇಳಿಕೆ ಹಾಗೂ ಸಂಗ್ರಹಿಸಲಾದ ದಾಖಲಾತಿಗಳಿಂದ ಕಂಡು ಬಂದಿರುತ್ತದೆ ಎಂಬ ವರದಿಯನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಹೆಚ್ಚುವರಿ ಆರಕ್ಷಕ ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಅವರು ವರದಿ ಸಲ್ಲಿಸಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ಕೆಳಕಂಡಂತೆ ಅಭಿಪ್ರಾಯ ಸಲ್ಲಿಸಿದ್ದಾರೆ:-

1. "ನನ್ನ ಜನ್ಮ ದಿನಕ್ಕೆ ಸಂಬಂಧಿಸಿದಂತೆ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅನುಸಾರವಾಗಿ ಜನನಕ್ಕೆ ಸಂಬಂಧಿಸಿದ ದಾಖಲೆಗಳು ಮಾತ್ರ ಪರಿಗಣಿಸಬೇಕಾಗಿದ್ದು, ಜನನಕ್ಕೆ ಸಂಬಂಧಿಸಿದ ದಾಖಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಮಾತ್ರ ಇತರೇ ದಾಖಲಾತಿಗಳನ್ನು ಪರಿಗಣಿಸಬೇಕಾಗುತ್ತದೆ. ಆದರೆ ಅರ್ಜಿದಾರಳಾದ ನಾನು ದಿನಾಂಕ: 18.01.1996 ರಂದು ಜನಿಸಿದ್ದು, ಆ ಬಗ್ಗೆ ಆಸ್ಪತ್ರೆ ದಾಖಲಾತಿಗಳಲ್ಲಿ, ಹಾಸನ ಪುರಸಭಾ ಕಛೇರಿಯ ದಾಖಲಾತಿಗಳಲ್ಲಿ ಮತ್ತು ನನ್ನ ಜನನ ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರುವ ಕಾರಣ ಶಾಲಾ ವರ್ಗಾವಣೆ ಪತ್ರದಲ್ಲಿ ಮತ್ತೊಂದು ದಿನಾಂಕವನ್ನು ನಮೂದಿಸಲಾಗಿದೆ ಎಂಬ ಕಾರಣದಿಂದ ನಾನು ದೂರಿನಲ್ಲಿ ನಮೂದಿಸಿರುವ ದಿನಾಂಕವನ್ನು ಆಸ್ಪತ್ರೆಯ ದಾಖಲಾತಿಗಳನ್ನು ಹಾಸನ ಪುರಸಭಾ ಕಛೇರಿಯ ದಾಖಲಾತಿಗಳನ್ನು ಮತ್ತು ನನ್ನ ಜನನ ಪ್ರಮಾಣ ಪತ್ರಗಳನ್ನು ಅಲ್ಲಗಳೆಯಲು ಬರುವುದಿಲ್ಲ....

2. ಶಿವಾನಂದರವರು ಹಾಜರುಪಡಿಸಲಾಗಿದೆ ಎಂದು ಹೇಳಲಾದ ಫೋಟೋಗಳ ಆಧಾರದ ಮೇಲೆ ದೂರುದಾರಳಾದ ನಾನು ಮತ್ತು ಶಿವಾನಂದರವರು ಹಾಗೂ ನಮ್ಮಗಳ

ಕುಟುಂಬದವರು ಪರಸ್ಪರ ಹೊಂದಾಣಿಕೆಯಿಂದ ಇದ್ದ ಕಾರಣದಿಂದ ಬಲವಂತವಾದ ಮದುವೆ ಆಗಿರುವಂತೆ ಕಂಡು ಬರುತ್ತಿಲ್ಲ ಎಂಬುದಕ್ಕೆ ವಿವರಣೆ ಮತ್ತು ಅಭಿಪ್ರಾಯ:–

ನಾವು ಮತ್ತು ಆರೋಪಿತರ ಕುಟುಂಬದವರು ಎಲ್ಲರಿಗೂ ತಿಳಿದಿರುವಂತೆ ಸಂಬಂಧಿಕರಾಗಿದ್ದು, ಹಾಗಾಗಿ ಒಬ್ಬರಿಗೊಬ್ಬರು ವಿಶ್ವಾಸದಿಂದಿದ್ದು, ಆ ಸಂದರ್ಭದ ದುರುಪಯೋಗ ಪಡೆದ ಶಿವಾನಂದರವರು ದುರಾಲೋಚನೆಯಿಂದ ಫೋಟೋಗಳನ್ನು ತೆಗೆದು ಆನಂತರ ಪರಿಸ್ಥಿತಿಯ ದುರುಪಯೋಗ ಪಡೆದುಕೊಂಡು ನಮ್ಮ ಕುಟುಂಬದಲ್ಲಿ ನನಗೆ ತತ್‌ಕ್ಷಣದಲ್ಲಿ ಯಾರೂ ಸಹಾಯಕ್ಕೆ ಬರಲು ಸಾಧ್ಯವಿಲ್ಲ ಎಂಬುದನ್ನು ತಿಳಿದುಕೊಂಡು ನನ್ನನ್ನು ಅಪಹರಿಸಿ ನನ್ನ ಇಚ್ಛೆಗೆ ವಿರುದ್ಧವಾಗಿ ಸಂಚು ರೂಪಿಸಿ, ಬಲವಂತವಾಗಿ ಹೆದರಿಸಿ ಮದುವೆ ಮಾಡಿಕೊಂಡಿದ್ದು, ಆ ಸಂದರ್ಭದಲ್ಲಿ ನಾನು ಅಸಹಾಯಕಳಾಗಿದ್ದು, ಅದನ್ನು ಪ್ರತಿಭಟಿಸುವ ಮಾನಸಿಕ ಸ್ಥೈರ್ಯ ಇಲ್ಲದೇ ಮನದಲ್ಲಿಯೇ ವೇದನೆಯನ್ನು ಅನುಭವಿಸಿಕೊಂಡಿರುತ್ತೇನೆ.....

4. ವಿಜಯ ಕುಮಾರ್ ಎಂಬುವವರು ರಾಜಕೀಯ ಮುಖಂಡನಾಗಿದ್ದು,..... ವಿಜಯಕುಮಾರನ ಒತ್ತಡಕ್ಕೆ ಮಣಿದು ಪಿ.ಎಸ್.ಐ ಮತ್ತು ಎ.ಎಸ್.ಐ ರವರು ಆರೋಪಿತರ ಮೇಲೆ ಸೂಕ್ತ ಕ್ರಮ ಕೈಗೊಳ್ಳದೇ ಮತ್ತು ನಾನು ಸಲ್ಲಿಸಿದ ದೂರಿನ ಅನುಸಾರ ಎಫ್.ಐ.ಆರ್ ಮಾಡದೇ ಇರುವುದು ಮೇಲುನೋಟಕ್ಕೆ ಕಂಡು ಬರುತ್ತದೆ. ವಿಜಯಕುಮಾರನು ತನ್ನ ರಾಜಕೀಯ ದೃಷ್ಟಿ ಕೋನದಿಂದ ಬಲಾಢ್ಯರಾದ ಆರೋಪಿತರುಗಳಿಗೆ ಸಹಾಯ ಮಾಡಿರುವುದು ಕಂಡು ಬಂದಿರುವುದರಿಂದ ಆತನ ಸಾಕ್ಷಿಗಳನ್ನು ಪರಿಗಣಿಸುವುದು ಸಮಂಜಸವಲ್ಲ....

....ನಾನು ಕೊಟ್ಟ ದೂರಿನಂತೆ/ ಪ್ರಥಮ ವರ್ತಮಾನದಂತೆ ಎಫ್.ಐ.ಆರ್ ಮಾಡದೇ ಇರುವುದು ಮತ್ತು ಸೂಕ್ತ ಕಾನೂನು ಕ್ರಮ ಕೈಗೊಂಡಿಲ್ಲದಿರುವುದು ವರದಿಯಲ್ಲಿ ಕಂಡು ಬಂದಿದ್ದು, ಅವರ ವಿರುದ್ಧ ಮಾನ್ಯ ಆಯೋಗವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮತ್ತು ನ್ಯಾಯ ಒದಗಿಸಿಕೊಡಬೇಕೆಂದು ನನ್ನ ಪ್ರಾರ್ಥನೆ."

ದೂರು, ವರದಿ ಮತ್ತು ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದೂರರ್ಜಿಗೆ ಸಂಬಂಧಿಸಿದಂತೆ ಜಾವಗಲ್ ಆರಕ್ಷಕ ಠಾಣೆಯ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ಅವರು ತನಿಖಾ ಕಾಲದಲ್ಲಿ ಅರ್ಜಿದಾರರ ದೂರು ಪ್ರತಿಯನ್ನು ಪರಿಶೀಲಿಸದೆ/ ಹಾಗೂ ಅರ್ಜಿದಾರರ ಅಪ್ರಾಪ್ತ ವಯಸ್ಸಿನ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ದೃಢಪಡಿಸಿಕೊಂಡು ಘಟನೆಗೆ ಸಂಬಂಧಪಟ್ಟ ಕಲಂಗಳನ್ನು ಅಳವಡಿಸದೇ ಸರಿಯಾದ ತನಿಖೆ ನಡೆಸದೇ ನಿರ್ಲಕ್ಷ್ಯತೆ ಹಾಗೂ ನಿಷ್ಕಾಳಜಿತನ ತೋರಿರುವುದು ಕಂಡು ಬಂದಿರುವುದಾಗಿ ಆಯೋಗದ ಎಡಿಜಿಪಿ ಅವರು ವರದಿ ಮಾಡಿರುವುದರಿಂದ, ಕರ್ತವ್ಯ ನಿರ್ಲಕ್ಷ್ಯತನ ಮತ್ತು ನಿಷ್ಕಾಳಜಿಗಾಗಿ ಜಾವಗಲ್ ಠಾಣೆಯ ಅಂದಿನ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು (ಹಾಲಿ ಪಿ.ಎಸ್.ಐ ಕೊಡಿಗೇಹಳ್ಳಿ, ಬೆಂಗಳೂರು) ಅವರಿಗೆ ಪಿ.ಎಚ್.ಆರ್ ಆಕ್ಟ್ 1993 ಕಲಂ 16ರ ಅಡಿ ಕಾರಣ

ಕೇಳುವ ನೋಟೀಸು ಜಾರಿ ಮಾಡಿ ಈ ಬಗ್ಗೆ ಹೇಳುವುದೇನಾದರೂ ಇದ್ದಲ್ಲಿ, ಆಯೋಗದ ಮುಂದೆ ಹಾಜರಾಗಿ ಲಿಖಿತ ಸಮಜಾಯಿಷಿ ಸಲ್ಲಿಸುವಂತೆ ದೂರುದಾರರಾದ ವಿದ್ಯಾಶ್ರೀ ಅವರಿಗೂ ವಿಚಾರಣೆಗೆ ಹಾಜರಾಗುವಂತೆ ಆದೇಶಿಸಿದ್ದು, ದಿನಾಂಕ.12.10.2020 ರಂದು ಅಂದಿನ ಪಿ.ಎಸ್.ಐ ಆದ ಶ್ರೀ ರಾಘವೇಂದ್ರ ಬಾಬು, (ಹಾಲಿ ಪಿ.ಐ ಕೊಡಿಗೇಹಳ್ಳಿ) ಹಾಗೂ ದೂರುದಾರರಾದ ವಿದ್ಯಾಶ್ರೀ ರವರು ಆಯೋಗದ ಮುಂದೆ ಹಾಜರಾಗಿದ್ದು, ವಿದ್ಯಾಶ್ರೀ ರವರು ಅವರ ಹೇಳಿಕೆಯನ್ನು ನೀಡಿರುತ್ತಾರೆ. ಶ್ರೀ ರಾಘವೇಂದ್ರ ಬಾಬು ರವರು ಅವರ ಲಿಖಿತ ಸಮಜಾಯಿಷಿ ನೀಡಲು ಕಾಲಾವಕಾಶ ಕೋರಿರುತ್ತಾರೆ.

ದೂರುದಾರರಾದ ವಿದ್ಯಾಶ್ರೀ ರವರು ಆಯೋಗದ ಮುಂದೆ ನೀಡಿದ ಹೇಳಿಕೆಯು ಈ ಕೆಳಕಂಡಂತೆ ಇದೆ:-

> *"I state that in the year 2013, in the month of August while I was pursuing 3rd year Diploma in Electronic and Telecommunication from Holenarasipura Government Polytechnic I was staying in BCM hostel at Holenarasipura. On 15.08.2013, being Independence day was Government holiday I was returning home on 14.08.2013 at around 4:30 P.M. I was at Javagal bus stand waiting for bus or any other vehicle which would go to my village Handralu. At that time, Sri Shivanand whom I knew along with his sister Smt Rekha came at the bus stand in a Cruiser vehicle and told me that we are also going to the village and she can come along with them. Although, initially I said that I would go by bus, Sri Shivanand having insisted me to go along with them in the van saying further that his younger sister is also with him in the van and there is nothing to fear, and as Sri Shivanand was known to me, I then accepted to go in his vehicle. Sri Shivanand instead of taking me to my village Handralu, took the van on a different route. At that time, I questioned Sri Shivanand as to why he is not taking me to my village and taking the vehicle on a different route. I then tried to call my mother through my mobile and at that time, Smt Rekha sister of Sri Shivanand snatched my mobile and hit me. Thereafter, Sri Shivanand drove the vehicle to a hall near Yediyuru and stopped the vehicle. There around 10 relatives of Sri Shivanand were already present. The younger brother of Sri Shivanand Sri Sharan Kumar and his uncle Sri Parameshappa got a video recording done by threatening me that I am marrying Sri Shivanand voluntarily. This place being isolated I was helpless and as there was no one to come to my help. I was even threatened that acid would be thrown on me if I shout and that my parents would be killed. I was kept in that hall for the entire*

*night and on next day in the morning after getting me ready as bride for marriage and they took me a Kilometer away where a small temple was there. There other than Poojari no one was there. Thereafter, I was forcibly married to Sri Shivanand by threatening. Then I was taken to Harnahalli in the house of Sri Shivanand. They had also taken photographs of the marriage. I was kept in the house of Sri Shivanand till 23.08.2013. In the evening of 23.08.2013 they brought me to Arasikere along with his family members. I was threatened to sign a document which was produced before me and then taken to the office of Sub-registrar of marriages which I learnt later and made me to sign a document produced before me. There were not many people in the office at that time. Thereafter, I was left to return to my home. I then returned to my house and from there I went back to my college hostel.*

*After about 2 years when my father came from Bangalore and stayed with us in Handaralu village I had told my father about the incident of forcible marriage. At that time my father came along with me to Javagal police station. I do not exactly remember the date now but it was a month and a half before Dasara in the year 2015. At the police station, I have narrated the incident of my forcible marriage to Sri Ragavendra Babu, Sub Inspector of Police but I found that there was no inclination to register the case. I had then asked the Sub Inspector of Police to register a case, but case was not registered and thereafter, I was coming to the police station for 15-20 days continuously but Sri Ragavendra Babu, Police Sub Inspector did not register the case. I was made to sit in the police station till 7 P.M and even till 9 P.M in the night but the PSI did not respond to my request for registering the complaint. Thereafter, I was in tremendous stress and went to Superintendent of Police Hassan on a date which was two days before registration of FIR. The Superintendent of Police had telephoned to the Sub Inspector of Police in my presence for taking the complaint and registration of the complaint and that if injustice has been done to her, to give her justice. After meeting Superintendent of Police, I came to Javagal police station on the next day but Sri Ragavendra Babu was not available. I went to the police station again a day after that. The Sub Inspector of Police then took the complaint and registered FIR as he wanted. I have repeatedly told that I was a minor when I was forcibly married. The Sub Inspector of Police did not consider this. Further, I had given complaint against 11 members*

*including Sri. Shivanand who got me forcibly married but FIR was registered only against Sri Shivanad. Further Section 498-A IPC was incorporated although I did not say anything with regard to the offence under Section 498-A IPC. Although I had given my birth certificate which shows that I was a minor, the Sub Inspector of Police brought the school leaving certificate which showed me as major and took that into consideration.*

*Further, investigation was not properly conducted and in the charge Sheet filed the statements recorded of our neighbours namely Smt Gowramma and Smt Madhu were changed to the effect that I was known to Sri Shivannanda and others and further recording the statements in a way to help the accused. I had to come to Karnataka State Human Rights Commission only because the local police did not help me."*

ದಿನಾಂಕ.28.12.2020ರಂದು ಶ್ರೀ ರಾಘವೇಂದ್ರ ಬಾಬು ಹಾಗೂ ದೂರುದಾರರು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ರಾಘವೇಂದ್ರ ಬಾಬು ರವರು ಅವರ ಹೇಳಿಕೆಯನ್ನು ನೀಡಿದ್ದು, ದೂರುದಾರರಾದ ವಿದ್ಯಾಶ್ರೀ ರವರು ಅವರ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ಶ್ರೀ ರಾಘವೇಂದ್ರ ಬಾಬು ರವರು ಅವರ ಲಿಖಿತ ಸಮಜಾಯಿಷಿಯನ್ನು ನೀಡಲು ಕಾಲಾವಕಾಶವನ್ನು ಕೋರಿರುತ್ತಾರೆ.

ಶ್ರೀ ರಾಘವೇಂದ್ರ ಬಾಬು ಎಂ. ಬಿ., ಪೊಲೀಸ್ ಇನ್ಸ್‌ಪೆಕ್ಟರ್, ಕೊಡಿಗೇಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು, ರವರ ಹೇಳಿಕೆಯು ಕೆಳಕಂಡಂತೆ ಇದೆ:–

"ನಾನು ಮೇ 2015 ರಿಂದ ಜನವರಿ 2017 ವರೆಗೆ ಜಾವಗಲ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯ ನಿರ್ವಹಿಸುತ್ತಿದ್ದಾಗ ದಿನಾಂಕ.10.11.2015ರ ಬೆಳಿಗ್ಗೆ ಸುಮಾರು 10.45 ಗಂಟೆಗೆ ಜಾವಗಲ್ ಹೋಬಳಿ, ಹಂದ್ರಾಳು ಗ್ರಾಮದ ವಾಸಿಯಾದ ಶ್ರೀ ಈಶ್ವರಪ್ಪ ಹಾಗೂ ಅವರ ಮಗಳಾದ ವಿದ್ಯಾಶ್ರೀ ರವರು ಠಾಣೆಗೆ ಹಾಜರಾಗಿ ಎ.ಎಸ್.ಐ ಶ್ರೀ ಚಲುವಮೂರ್ತಿ ರವರನ್ನು ಭೇಟಿ ಮಾಡಿ ದೂರನ್ನು ನೀಡಿದ್ದು, ಎ.ಎಸ್.ಐ ಶ್ರೀ ಚಲುವಮೂರ್ತಿ ರವರು ದೂರನ್ನು ಸ್ವೀಕರಿಸಿ, ಠಾಣಾ ಮೊ.ಸಂಖ್ಯೆ.185/2015 ಕಲಂ 341, 342, 323, 504, 506, 498(ಎ) ರೆ/ವಿ 34 ಐಪಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

ದೂರುದಾರರಾದ ವಿದ್ಯಾಶ್ರೀ ರವರು ಪ್ರಕರಣದ ಬಗ್ಗೆ ದೂರು ನೀಡಲು 15 ದಿವಸಗಳಿಂದ ಜಾವಗಲ್ ಪೊಲೀಸ್ ಠಾಣೆಗೆ ಓಡಾಡುತ್ತಿದ್ದು, ದೂರು ದಾಖಲು ಮಾಡಿಕೊಂಡಿರುವುದಿಲ್ಲವೆಂದು ಹೇಳಿರುವುದು ಸುಳ್ಳು. ನಾನು ದೂರನ್ನು ದಾಖಲು ಮಾಡಿಕೊಳ್ಳಲು ವಿಳಂಬ ಮಾಡಿರುವುದಿಲ್ಲ.

ನಾನು ದಿನಾಂಕ.09.11.2015 ರಿಂದ 10 ದಿನಗಳ ಕಾಲ ಹಾಸನಾಂಬೆ ದೇವಸ್ಥಾನದ ಬಂದೋಬಸ್ತ್ ಕರ್ತವ್ಯದಲ್ಲಿದ್ದು, ಠಾಣಾ ಉಸ್ತುವಾರಿಯಾಗಿ ಎ.ಎಸ್.ಐ ಶ್ರೀ ಚಲುವಮೂರ್ತಿಯವರು ವಹಿಸಿಕೊಂಡಿರುತ್ತಾರೆ.

ದಿನಾಂಕ.08.01.2016 ರಂದು ಮುಂದಿನ ತನಿಖೆಗಾಗಿ ಕಡತವನ್ನು ಎ.ಎಸ್.ಐ ಶ್ರೀ ಚಲುವಮೂರ್ತಿಯವರಿಂದ ಪಡೆದು ತನಿಖೆಯನ್ನು ಮುಂದುವರೆಸಿ, ಪ್ರಕರಣದ ಕಡತವನ್ನು ಪರಿಶೀಲಿಸಲಾಗಿ ಎ.ಎಸ್.ಐ ಶ್ರೀ ಚಲುವ ಮೂರ್ತಿರವರು ಪ್ರಕರಣದಲ್ಲಿ ಸ್ಥಳ ಪಂಚನಾಮೆ ಜರುಗಿಸಿ, ಸಾಕ್ಷೀದಾರರ ಹೇಳಿಕೆ ಪಡೆದು, ದಾಖಲಾತಿಗಳನ್ನು ಸಂಗ್ರಹಿಸಿರುವುದು ಕಂಡು ಬಂದಿರುತ್ತದೆ. ನಂತರ ಈ ಹಿಂದೆ ತನಿಖೆ ಕೈಗೊಂಡಿದ್ದ ಎ.ಎಸ್.ಐ ಶ್ರೀ ಚಲುವಮೂರ್ತಿ ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಾಹ ನೋಂದಣಾಧಿಕಾರಿಯವರಿಗೆ ಕೋರಿದ ದಾಖಲಾತಿಗಳಾದ ವಿವಾಹ ನೋಂದಾವಣೆ ಪ್ರಮಾಣ ಪತ್ರ, ವಿವಾಹ ನೊಂದಾವಣೆಗೆ ಸಂಬಂಧಿಸಿದ ನಮೂನೆ ಪತ್ರ–1ಎ, ಸಮ್ಮರಿ ರಿಪೋರ್ಟ್, ನಮೂನೆ–1 ಮತ್ತು 2, ಶ್ರೀ ಶಿವಾನಂದರವರ ಶಾಲಾ ದಾಖಲಾತಿ ದೃಢೀಕರಣ ಪತ್ರ, ವಾಸ ದೃಢೀಕರಣ ಪತ್ರ, ಚುನಾವಣಾ ಗುರುತಿನ ಚೀಟಿ, ವಿದ್ಯಾಶ್ರೀ ರವರ ಶಾಲಾ ವರ್ಗಾವಣೆ ಪ್ರಮಾಣ ಪತ್ರ, ಪಡಿತರ ಚೀಟಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ವಾಸ ದೃಢೀಕರಣ ಪತ್ರ, ದಿನಾಂಕ.15.08.2013 ರಂದು ಮದುವೆಯಾಗಿರುವ ಬಗ್ಗೆ ಮದುವೆ ಆಹ್ವಾನ ಪತ್ರಿಕೆ, ಬಾಳೆಹೊನ್ನೂರು ಮಠ ಯಡೆಯೂರು ಶ್ರೀ ಕ್ಷೇತ್ರದಲ್ಲಿ ಮದುವೆಗಾಗಿ ಪಾವತಿಸಿರುವ ಕಾಣಿಕೆ ರಸೀದಿ, ವಿವಾಹ ನೊಂದಣಿ ಪ್ರಮಾಣ ಪತ್ರ, ಮದುವೆಯಾದ ಸಂದರ್ಭದಲ್ಲಿ ತೆಗೆಸಲಾಗಿರುವ ಫೋಟೋ ಪ್ರತಿಗಳನ್ನು ಹಿರಿಯ ಉಪ ನೊಂದಣಾಧಿಕಾರಿ, ಅರಸೀಕೆರೆ ರವರ ಕಛೇರಿಯಿಂದ ಪಡೆದುಕೊಂಡ ದೃಢೀಕೃತ ದಾಖಲಾತಿಗಳನ್ನು ಪ್ರಕರಣದ ಕಡತದಲ್ಲಿ ಅಡಕಗೊಳಿಸಲಾಗಿರುತ್ತದೆ.

ದಿನಾಂಕ.10.01.2016 ರಂದು ಸಬ್‌ರಿಜಿಸ್ಟರ್ ಕಛೇರಿಯ ವಿವಾಹ ನೊಂದಣಾಧಿಕಾರಿಗಳಾದ ಶ್ರೀ ಯೋಗಯ್ಯರವರನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿದ್ದು, ಸದರಿಯವರು ತಮ್ಮ ಹೇಳಿಕೆಯಲ್ಲಿ ದಿನಾಂಕ.23.08.2013 ರಂದು ಶ್ರೀ ಶಿವಾನಂದ ಹಾಗೂ ವಿದ್ಯಾಶ್ರೀ ರವರು ನೋಂದಣಿ ಕಛೇರಿಗೆ ಹಾಜರಾಗಿ ಹಿಂದೂ ವಿವಾಹ ಕಾಯ್ದೆ ಅಡಿ ವಿವಾಹ ನೊಂದಣಿ ಮಾಡಬೇಕೆಂದು ಅರ್ಜಿ ಸಲ್ಲಿಸಿಕೊಂಡಿದ್ದು, ಶ್ರೀ ಶಿವಾನಂದನ ಶಾಲಾ ದಾಖಲಾತಿ ದೃಢೀಕರಣ ಪತ್ರ, ವಾಸ ದೃಢೀಕರಣ ಪತ್ರ, ಚುನಾವಣಾ ಗುರುತಿನ ಚೀಟಿ, ವಿದ್ಯಾಶ್ರೀ ರವರ ಶಾಲಾ ವರ್ಗಾವಣೆ ಪ್ರಮಾಣ ಪತ್ರ, ಪಡಿತರ ಚೀಟಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ವಾಸ ದೃಢೀಕರಣ ಪತ್ರ ಹಾಗೂ ನೋಟರಿ ಪ್ರಮಾಣ ಪತ್ರವನ್ನು ಹಾಜರುಪಡಿಸಿದ ಮೇರೆಗೆ ಸಾಕ್ಷೀದಾರರಾದ ಹಾರ್‍ನಹಳ್ಳಿ ಗ್ರಾಮದ ಶ್ರೀ ಶಿವಲಿಂಗಪ್ಪ ಮತ್ತು ಹಂದ್ರಾಳು ಗ್ರಾಮದ ಶ್ರೀ ಪರಮೇಶ್ವರಪ್ಪ ಹಾಗೂ ಶ್ರೀ ಶರಣಕುಮಾರ್ ರವರ ಸಮಕ್ಷಮ ಹಿಂದೂ ವಿವಾಹದ ಕಾಯ್ದೆ ಯಡಿ ವಿವಾಹ ನೊಂದಣಿ ಮಾಡಿರುವುದಾಗಿ ತಿಳಿಸಿರುತ್ತಾರೆ. ವಿದ್ಯಾಶ್ರೀ ರವರು ದೂರಿನಲ್ಲಿ ತಿಳಿಸಿರುವಂತೆ ಆಕೆಯನ್ನು ಯಾರೂ ಸಹ ಬಲವಂತದಿಂದ ಕರೆದುಕೊಂಡು ಬಂದು ಸಹಿ ಮಾಡಿಸಿರುವುದಿಲ್ಲ. ದೂರುದಾರರಾದ ವಿದ್ಯಾಶ್ರೀ ರವರು ಸ್ವತ: ಶ್ರೀ ಶಿವಾನಂದ ರವರೊಂದಿಗೆ ಕಛೇರಿಗೆ ಹಾಜರಾಗಿ ಸಹಿ ಮಾಡಿ ಹೋಗಿರುವುದಾಗಿ ತಿಳಿಸಿ ತಮ್ಮ ಹೇಳಿಕೆ ನೀಡಿರುತ್ತಾರೆ.

ದಿನಾಂಕ.20.01.2016 ರಂದು ಈ ಪ್ರಕರಣದ ಸಾಕ್ಷೀದಾರರುಗಳ ಹೇಳಿಕೆಯನ್ನು ದಾಖಲು ಮಾಡಿದ್ದು, ತಮ್ಮ ಹೇಳಿಕೆಯಲ್ಲಿ ಶ್ರೀ ಶಿವಾನಂದ್ ಹಾಗೂ ವಿದ್ಯಾಶ್ರೀ ರವರು ಸಂಬಂಧಿಕರಾಗಿದ್ದು ಇಬ್ಬರು ಪರಸ್ಪರ ಪ್ರೀತಿಸುತಿದ್ದು ಹಿರಿಯರ ಸಮ್ಮುಖದಲ್ಲಿ ಶ್ರೀ ಯಡೆಯೂರು ದೇವಸ್ಥಾನದಲ್ಲಿ ಮದುವೆಯಾಗಿರುವುದು ತಿಳಿದು ಬಂದಿರುತ್ತದೆ.

ವಿದ್ಯಾಶ್ರೀ ಮತ್ತು ಆರೋಪಿ ಶಿವಾನಂದ ಇಬ್ಬರೂ ಸೇರಿ ನಾವಿಬ್ಬರೂ ವಯಸ್ಕರಾಗಿದ್ದು ನಾವಿಬ್ಬರೂ ಪರಸ್ಪರ ಒಪ್ಪಿ ಗುರುಹಿರಿಯರ ಸಮ್ಮುಖದಲ್ಲಿ ವಿವಾಹವಾಗಲು ಒಪ್ಪಿರುತ್ತೇವೆ ಎಂದು ಅರಸೀಕೆರೆಯ ನೋಟರಿ ಶ್ರೀ ವೈ.ಬಿ.ಚಂದ್ರಶೇಖರಪ್ಪ ರವರ ಮುಂದೆ ಸ್ವಯಂ ಘೋಷಣೆ ಮಾಡಿಕೊಂಡು ಜಂಟಿ ಪ್ರಮಾಣ ಪತ್ರವನ್ನು ಮಾಡಿಸಿರುವುದು ಕಂಡು ಬರುತ್ತದೆ.

ದಿನಾಂಕ.14.08.2013 ರಂದು ಮತ್ತು ದಿನಾಂಕ.15.08.2013 ರಂದು ವಿವಾಹ ಕಾರ್ಯಕ್ರಮ ನಿಶ್ಚಯವಾಗಿದ್ದ ಬಗ್ಗೆ ವಿವಾಹಕ್ಕೂ ಮೊದಲೆ ಆಹ್ವಾನ ಪತ್ರಿಕೆಯನ್ನು ಪ್ರಿಂಟ್ ಮಾಡಿಸಿ ಎಲ್ಲಾ ಸಂಬಂಧಿಕರಿಗೆ ಹಾಗೂ ಪರಿಚಯಸ್ಥರಿಗೆ ಹಂಚಿರುವುದು ಕಂಡು ಬರುತ್ತದೆ. ಕಿಡ್ನಾಪ್ ಮಾಡುವ ಪ್ಲಾನ್ ಇದ್ದಿದ್ದರೆ ಮೊದಲೇ ಆಹ್ವಾನ ಪತ್ರಿಕೆಯನ್ನು ಪ್ರಿಂಟ್ ಮಾಡಿಸುವ ಅವಶ್ಯಕತೆ ಇರುತ್ತಿರಲಿಲ್ಲ.

ನಂತರ ವಿದ್ಯಾಶ್ರೀ ರವರ ಮದುವೆ ಮಾಡಿಸಿದ ಜ್ಯೋತಿಷ್ಯರಾದ ಶ್ರೀ ಪ್ರಭು ಎಂಬುವವರನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿದ್ದು ಅವರು ತಮ್ಮ ಹೇಳಿಕೆಯಲ್ಲಿ ದಿನಾಂಕ.15.08.2013 ರಂದು ಶ್ರೀ ಯಡೆಯೂರು ಕ್ಷೇತ್ರದಲ್ಲಿ ಬೆಳಗ್ಗೆ 7.00 ಗಂಟೆಗೆ ಮದುವೆ ಕಾರ್ಯ ಮಾಡಿಸುವಂತೆ ಕೋರಿ 500/- ರೂಗಳ ರಸೀದಿಯನ್ನು ಪಡೆದಿರುವ ದಾಖಲಾತಿ ಇದೆ.

ತನಿಖಾ ಸಮಯದಲ್ಲಿ ಪಡೆದ ವಿದ್ಯಾಶ್ರೀ ರವರ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಮತ್ತು ಶಾಲಾ ವರ್ಗಾವಣೆ ಸರ್ಟಿಫಿಕೇಟ್‌ನಲ್ಲಿ ತನ್ನ ಜನ್ಮ ದಿನಾಂಕ.18.06.1995 ಎಂದು ಹೇಳಿರುವ ಬಗ್ಗೆ ಸ್ವತ: ತಾವೇ ಘೋಷಣೆ ಮಾಡಿಕೊಂಡಿದ್ದು, ವಿವಾಹ ದಿನಾಂಕಕ್ಕೆ ವಿದ್ಯಾಶ್ರೀ ರವರ ವಯಸ್ಸು 18 ವರ್ಷ 2 ತಿಂಗಳು ವಯಸ್ಕರಾಗಿರುವುದು ಕಂಡು ಬರುತ್ತದೆ.

ದಿನಾಂಕ.23.08.2013 ರಂದು ವಿದ್ಯಾಶ್ರೀ ಮತ್ತು ಶ್ರೀ ಶಿವಾನಂದ ರವರು ವಿವಾಹ ನೊಂದಣಿ ಮಾಡಲು ಕೋರಿ ಜಂಟಿಯಾಗಿ ಮೆಮೋರಂಡಮ್ ಆಫ್ ಮ್ಯಾರೇಜ್ ಸಲ್ಲಿಸಿಕೊಂಡಿರುತ್ತಾರೆ ಮತ್ತು ಅದೇ ದಿನ ವಿವಾಹ ನೋಂದಣಿ ಮಾಡಿಸಿಕೊಂಡು ವಿವಾಹ ನೋಂದಣಿ ಸರ್ಟಿಫಿಕೇಟ್ ಸಹ ಪಡೆದುಕೊಂಡಿರುತ್ತಾರೆ.

ಹಾಗೂ ಅರ್ಜಿದಾರರು ತನ್ನ ಜನನ ಪ್ರಮಾಣ ಪತ್ರದಲ್ಲಿ ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವ ಜನ್ಮ ದಿನಾಂಕದ ವ್ಯತ್ಯಾಸದ ಬಗ್ಗೆ ಯಾಕೆ ತಿದ್ದುಪಡಿ ಮಾಡಿಸಲಿಲ್ಲ.

ದಿನಾಂಕ.11.05.2016 ರಂದು ಈ ಪ್ರಕರಣದ ತನಿಖೆಯನ್ನು ಪೂರೈಸಿ, ತನಿಖೆಯಲ್ಲಿ ಕಂಡು ಬಂದ ಸಾಕ್ಷಾಧಾರಗಳಿಂದ ಆರೋಪಿಯಾದ ಶ್ರೀ ಶಿವಾನಂದನ ಬಗ್ಗೆ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಿದ್ದಪಡಿಸಿ, ಸರ್ಕಾರಿ ಅಭಿಯೋಜಕರ ಬಳಿ ಪರಿಶೀಲಿಸಿ ಒಪ್ಪಿಗೆ ಪಡೆದು ಇನ್ಸ್‌ಪೆಕ್ಟರ್ ಹಾಗೂ ಡಿ.ವೈ.ಎಸ್.ಪಿ ರವರ ಬಳಿ ಪರಿಶೀಲನೆಗೆ ಒಳಪಡಿಸಿ ಘನ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಸದರಿ ಅರ್ಜಿದಾರರಾದ ವಿದ್ಯಾಶ್ರೀ ಠಾಣೆಗೆ ಹಾಜರಾಗಿ ದೂರು ನೀಡುವ ಸಮಯದಲ್ಲಾಗಲೀ ಅಥವಾ ಪ್ರಕರಣದ ತನಿಖಾ ಕಾಲದಲ್ಲಾಗಲಿ ತಾನು ಅಪ್ರಾಪ್ತ ವಯಸ್ಕಳೆನ್ನುವ ಬಗ್ಗೆ ಯಾವುದೇ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ.

ಮಾನ್ಯ ಆಯೋಗದ ಡಿವೈ.ಎಸ್.ಪಿ ರವರು ವಿಚಾರಣಾ ಕಾಲದಲ್ಲಿ ಮಾಡಿದ ಸಾಕ್ಷೀದಾರರ ಹೇಳಿಕೆಗಳಿಂದ ಹಾಗೂ ಸಂಗ್ರಹಿಸಲಾಗಿರುವ ಸಾಂದರ್ಭಿಕ ಸಾಕ್ಷಾಧಾರಗಳಿಂದ ಅರ್ಜಿದಾರರಾದ ವಿದ್ಯಾಶ್ರೀ ರವರು ಮತ್ತು ಆರೋಪಿ ಶ್ರೀ ಶಿವಾನಂದರವರು ಸಂಬಂಧಿಕರಾಗಿದ್ದು ಒಬ್ಬರಿಗೊಬ್ಬರು ಚಿರಪರಿಚಿತರಾಗಿರುವುದು ಕಂಡು ಬಂದಿರುತ್ತದೆ. ವಿದ್ಯಾಶ್ರೀ ರವರು ಶ್ರೀ ಶಿವಾನಂದನ ಕುಟುಂಬದವರೊಂದಿಗೆ ಪರಸ್ಪರ ಹೊಂದಾಣಿಕೆಯಿಂದ ಇದ್ದುದ್ದು ಪರಸ್ಪರ ಪ್ರೀತಿಸುತ್ತಿದ್ದು ಜೊತೆಯಲ್ಲಿ ಓಡಾಡಿಕೊಂಡಿದ್ದು ಕಂಡು ಬಂದಿದ್ದು, ಶ್ರೀ ಶಿವಾನಂದನು ವಿದ್ಯಾಶ್ರೀ ರವರನ್ನು ಅಪಹರಿಸಿಕೊಂಡು ಹೋಗಿ ಬಲವಂತವಾಗಿ ಮದುವೆಯಾಗಿರುವುದು ಕಂಡು ಬಂದಿರುವುದಿಲ್ಲ.

ಸದರಿ ದೂರುದಾರರಾದ ವಿದ್ಯಾಶ್ರೀ ರವರು ಠಾಣೆಗೆ ಹಲವಾರು ಬಾರಿ ದೂರು ನೀಡಲು ಬಂದಿದ್ದು, ದೂರು ಸ್ವೀಕರಿಸಿರುವುದಿಲ್ಲ ಹಾಗೂ ಮಾನ್ಯ ಎಸ್.ಪಿ ಸಾಹೇಬರನ್ನು ಭೇಟಿ ಮಾಡಿ ಅವರ ಮೂಲಕ ದೂರವಾಣಿ ಕರೆ ಮಾಡಿಸಿ ದೂರು ದಾಖಲಿಸುವಂತೆ ತಿಳಿಸಿರುವುದು ಸತ್ಯಕ್ಕೆ ದೂರವಾದದ್ದು, ಹಾಗೂ ನಾನು ಯಾವುದೇ ರಾಜಿ ಮಾಡಿಕೊಳ್ಳುವಂತೆ ಒತ್ತಾಯಿಸಿರುವುದಿಲ್ಲ. ಸದರಿ ಪ್ರಕರಣವನ್ನು ನಿಸ್ಪಕ್ಷಪಾತವಾಗಿ ಹಾಗೂ ಯಾವುದೇ ನಿರ್ಲಕ್ಷತೆಯನ್ನು ತೋರಿಸದೇ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾಪಟ್ಟಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ವಿದ್ಯಾಶ್ರೀಯವರ ಬೇಡಿಕೆಯ ಪ್ರಕಾರ ಶ್ರೀ ಶಿವಾನಂದ ರವರ ಕಡೆಯಿಂದ 10 ಲಕ್ಷ ರೂಗಳನ್ನು ಕೊಡಿಸಲಿಲ್ಲವೆಂಬ ದುರುದ್ದೇಶದಿಂದ ನನ್ನ ಮೇಲೆ ಆಪಾದಿಸಿ ದೂರನ್ನು ದಾಖಲಿಸಿರುತ್ತಾರೆ. ಆದುದರಿಂದ ಮಾನ್ಯರಾದ ತಾವು ತನ್ನ ಸಮಜಾಯಿಷಿಯನ್ನು ಸ್ವೀಕರಿಸಿ, ಈ ಆರೋಪದಿಂದ ಮುಕ್ತಗೊಳಿಸಬೇಕೆಂದು ಮನವಿ ಮಾಡುತ್ತೇನೆ."

ದೂರುದಾರರ ಮುಂದುವರೆದ ಹೇಳಿಕೆಯು ಈ ಕೆಳಕಂಡಂತೆ ಇದೆ:–

"ದಿನಾಂಕ.10.11.2015 ರಂದು ಎಫ್.ಐ.ಆರ್ ಆಗಿದ್ದು, ಅದಕ್ಕಿಂತ ಮುಂಚೆ 8, 9 ಬಾರಿ ಜಾವಗಲ್ ಪೊಲೀಸ್ ಠಾಣೆಗೆ ಹೋಗಿ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ಸರ್‌ಗೆ ದೂರು ದಾಖಲಿಸಿಕೊಳ್ಳಿ ಎಂಬುದಾಗಿ ಕೇಳಿಕೊಂಡರು ದೂರು ದಾಖಲಿಸಲಿಲ್ಲ. ನಂತರ ನಾನು ದಿನಾಂಕ. 08.11.2015ರಂದು ಸಂಜೆ 7.00 ಗಂಟೆಗೆ ಪೊಲೀಸ್ ಅಧೀಕ್ಷಕರು, ಹಾಸನ ರವರ ಕಚೇರಿಗೆ ಹೋಗಿ ಅವರ ಬಳಿ ಹೇಳಿಕೊಂಡಾಗ ಅವರು ಅಲ್ಲಿಂದಲೇ ಠಾಣೆಗೆ ಫೋನ್ ಮಾಡಿ, ದೂರು ದಾಖಲಿಸಿಕೊಳ್ಳುವಂತೆ ತಿಳಿಸಿದ ಮೇಲೆ ದಿನಾಂಕ. 10.11.2015 ರಂದು ಎ.ಎಸ್.ಐ ಶ್ರೀ ಚಲುವಮೂರ್ತಿ ರವರು ದೂರು ದಾಖಲಿಸಿಕೊಂಡರು.

ನಾನು ನನ್ನ ಲಿಖಿತ ದೂರಿನಲ್ಲಿ ಹೇಳಿರುವ ಪ್ರಕಾರ ಹಾಸನದ ರಾಜೀವ್ ನರ್ಸಿಂಗ್ ಹೋಂನಲ್ಲಿ ದಿನಾಂಕ.18.01.1996 ರಂದು ನಾನು ಹುಟ್ಟಿರುವುದು ಎಂದು ಸ್ಪಷ್ಟವಾಗಿ ನಮೂದಿಸಿದ್ದು, ನನ್ನನ್ನು ಕೇಳದೆ ಹಾಗೂ ಈ ಬಗ್ಗೆ ಅವರು ರಾಜೀವ್ ನರ್ಸಿಂಗ್ ಹೋಂನಲ್ಲಿ

ನನ್ನ ಜನನ ಪ್ರಮಾಣ ಪತ್ರವನ್ನು ತರಿಸಿಕೊಳ್ಳದೆ ಶಾಲೆಯಲ್ಲಿ ಏಕೆ ಜನನ ಪ್ರಮಾಣ ಪತ್ರವನ್ನು ತರಿಸಿಕೊಂಡಿದ್ದಾರೆ. ನಾನು ಅಪ್ರಾಪ್ತ ವಯಸ್ಕಳೆಂದು ನಮೂದಿಸಿರುವುದನ್ನು ಪರಿಗಣಿಸದೇ ಉದ್ದೇಶಪೂರ್ವಕವಾಗಿಯೇ ತರಿಸಿಕೊಂಡಿದ್ದಾರೆ.

ಮಾನ್ಯ DSP, ಅರಸೀಕೆರೆ ಸಬ್ ಡಿವಿಜನ್, ಹಾಸನ ಜಿಲ್ಲೆ ರವರ ಪತ್ರ ಸಂಖ್ಯೆ. ಎಸ್.ಡಿ.ಪಿ.ಓ/ಎಎಸ್‌ಕೆ/ಎಲ್‌ಪೆಟ್/45/2018 ದಿನಾಂಕ.05.02.2019 ರಲ್ಲಿ ಬರೆದಿರುವ ವರದಿಯಲ್ಲಿ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ರವರು ತನಿಖಾ ಕಾಲದಲ್ಲಿ ಎ.ಎಸ್.ಐ ಶ್ರೀ ಚಲುವಮೂರ್ತಿ ರವರು ದಾಖಲಿಸಿದ್ದ ಪ್ರಕರಣದ ಕಲಂಗಳಿಗನುಗುಣವಾಗಿ ತನಿಖೆಯನ್ನು ಕೈಗೊಂಡು ಕಲಂ 323, 498(ಎ)ಗಳನ್ನು ಹೊರತುಪಡಿಸಿ ಫಿರ್ಯಾದುದಾರರ ದೂರಿಗನುಗುಣವಾಗಿ ಕಲಂ 366, 363, 354, 347, 343, 342, 341, 120(ಬಿ), 463, 465, 464, 469, 471, 420, 506 ರೆ/ವಿ 34 ಐಪಿಸಿ ಜೊತೆಗೆ ಬಾಲ್ಯವಿವಾಹ ನಿಷೇದ ಕಾಯ್ದೆ ಹಾಗೂ ಪೋಕ್ಸೋ ಕಲಂಗಳ ಅನ್ವಯ ತನಿಖೆ ನಡೆಸದೇ ಹಾಗೂ ಆರೋಪಿ 2 ರಿಂದ 11 ರವರುಗಳನ್ನು ದೋಷಾರೋಪಣಾ ಪತ್ರದಿಂದ ಕೈಬಿಟ್ಟು, ಆರೋಪಿ 1 ಶ್ರೀ ಶಿವಾನಂದ ರವರ ವಿರುದ್ಧ ಮಾತ್ರ ದಿನಾಂಕ.11.05.2016 ರಂದು ದೋಷಾರೋಪಾ ಪತ್ರವನ್ನು ತಯಾರಿಸಿ ಘನ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ಎಂದು ವರದಿಸಿದ್ದಾರೆ.

ನಾನು ಹೊಳೆನರಸೀಪುರದ ಹಾಸ್ಟೆಲ್‌ನಲ್ಲಿ ಡಿಪ್ಲಮೋ ಓದುತ್ತಿದ್ದಾಗ ಯಾವಾಗಲೂ ನನ್ನ ಕಾಲೇಜ್ ಬ್ಯಾಗ್‌ನಲ್ಲಿ ನನ್ನ ಎಲ್ಲಾ ಶಾಲಾ ದಾಖಲಾತಿ ಎಸ್.ಎಸ್.ಎಲ್.ಎಲ್ ಮಾರ್ಕ್ಸ್ ಕಾರ್ಡ್, ಟಿ.ಸಿ, ವಾಸ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಗುರುತಿನ ಚೀಟಿ, ಆಧಾಯ ಪ್ರಮಾಣ ಪತ್ರಗಳ ಪ್ರತಿಗಳನ್ನು ಇಟ್ಟುಕೊಳ್ಳುತ್ತಿದ್ದೆ, ಹಾಗಾಗಿ ಇವುಗಳನ್ನು ಶ್ರೀ ಶಿವಾನಂದ್ ರವರು ನನ್ನ ಗಮನಕ್ಕೆ ಬಾರದೇ ಅವುಗಳನ್ನು ತೆಗೆದುಕೊಂಡು ವಿವಾಹ ನೋಂದಣ ಕಛೇರಿಗೆ ಹಾಜರುಪಡಿಸಿರುತ್ತಾರೆ.

ನನ್ನ ಮದುವೆ ಸಮಯದಲ್ಲಿ ತೆಗೆದ ಫೋಟೋಗಳು ಮತ್ತು ವಿಡಿಯೋವನ್ನು ಸೋಷಿಯಲ್ ಮಿಡಿಯಾದಲ್ಲಿ ಬಿಡುವುದಾಗಿ ಶ್ರೀ ಶಿವಾನಂದ್ ರವರು ನನಗೆ ಬೆದರಿಸುತ್ತಿದ್ದರಿಂದ ನಾನು ಅವರ ಜೊತೆ ಮದುವೆಯಾದ ವಿಷಯವನ್ನು ಎಲ್ಲೂ ಹೇಳಲಿಲ್ಲ.

ನನ್ನ ಮದುವೆ ಆಮಂತ್ರಣ ಪತ್ರವನ್ನು ಎಲ್ಲರಿಗೂ ಹಂಚಿರುವುದು ನನಗೆ ಗೊತ್ತಿಲ್ಲ. ಹಾಗೂ ವಿವಾಹ ನೊಂದಣಿ ಕಛೇರಿಯಲ್ಲಿ ನಮ್ಮಿಬ್ಬರ ಮದುವೆಗೆ ಸಾಕ್ಷಿದಾರರಾಗಿ ಸಹಿಗಳನ್ನು ಹಾಕಿರುವ ವ್ಯಕ್ತಿಗಳು ಶ್ರೀ ಶಿವಾನಂದ್ ರವರ ತಂದೆ ಶ್ರೀ ಶಿವಲಿಂಗಪ್ಪ, ಚಿಕ್ಕಪ್ಪ ಶ್ರೀ ಪರಮೇಶ್ವರಪ್ಪ, ಶರಣ್‌ಕುಮಾರ್ ರವರುಗಳು ಸಹಿ ಮಾಡಿದ್ದಾರೆ. ಆದರೆ ನಾನು ಈ ಮದುವೆಗೆ ಒಪ್ಪಿ ಮದುವೆಯಾಗುತ್ತಿದ್ದರೆ ನನ್ನ ತಂದೆ ತಾಯಿ ಕೂಡ ಹಾಜರಿದ್ದು, ಸಹಿ ಮಾಡಬಹುದಿತ್ತು. ಸಹಿ ಮಾಡಿರುವ ಎಲ್ಲಾ ಸಾಕ್ಷಿದಾರರುಗಳು ಶ್ರೀ ಶಿವಾನಂದ್ ಕಡೆಯವರೆ.

ಮದುವೆಮಾಡಿ ಕೊಂಡು ಸಬ್ ರಿಜಿಸ್ಟರ್ ಕಛೇರಿಯಿಂದ ಹೊರಗೆ ಬಂದು ಅಲ್ಲೆ ನನ್ನ ಕತ್ತಿನಲ್ಲಿದ್ದ ತಾಳಿಯನ್ನು ಅವರು ಬಿಚ್ಚಿಸಿಕೊಂಡರು."

ತದನಂತರ, ದಿನಾಂಕ.30.01.2021 ರಂದು ಶ್ರೀ ರಾಘವೇಂದ್ರ ಬಾಬು ರವರು ಆಯೋಗದ ಮುಂದೆ ಹಾಜರಾಗಿದ್ದು, ಅವರ ದಿನಾಂಕ.30.01.2021ರ ಪತ್ರದ ಅನ್ವಯ ಲಿಖಿತ ಸಮಜಾಯಿಷಿಯೊಂದಿಗೆ ಕೆಲವು ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಮುಂದುವರೆದು, ದೂರುದಾರರನ್ನು ಶಾಲೆಗೆ ಸೇರಿಸಿದ/ಪ್ರವೇಶಿಸಿದ ಸಮಯದಲ್ಲಿ ಸಲ್ಲಿಸಿದ ಯಾವ ದಾಖಲೆಗಳ ಮೇರೆಗೆ ಅವರ ಜನ್ಮ ದಿನಾಂಕವನ್ನು ದಿನಾಂಕ.18.06.1995ರಂತೆ ಪರಿಗಣಿಸಿದ ದಾಖಲೆಯನ್ನು ಪಡೆದು ಆಯೋಗದ ಮುಂದೆ ಹಾಜರುಪಡಿಸಲು ಕಾಲಾವಕಾಶವನ್ನು ಕೋರಿರುತ್ತಾರೆ.

ಶ್ರೀ ರಾಘವೇಂದ್ರ ಬಾಬು ರವರು ಅವರ ಲಿಖಿತ ಸಮಜಾಯಿಷಿಯು ಈ ಕೆಳಕಂಡಂತೆ ಇರುತ್ತದೆ:

1. ಶ್ರೀಮತಿ ವಿದ್ಯಾರವರು ಅವರ ತಂದೆಯ ಜೊತೆ ದಿನಾಂಕ:10.11.2015 ರಂದು ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದು, ಸದರಿ ದೂರಿನ ಅನ್ವಯ ಎ.ಎಸ್.ಐ ಶ್ರೀ.ಚೆಲುವಮೂರ್ತಿ ರವರು ದೂರನ್ನು ಸ್ವೀಕರಿಸಿಕೊಂಡು ಪ್ರಕರಣವನ್ನು ದಾಖಲಿಸಿರುತ್ತಾರೆ. ಶ್ರೀಮತಿ ವಿದ್ಯಾರವರು ಅದಕ್ಕಿಂತ ಮುಂಚೆ 8 ರಿಂದ 9 ಬಾರಿ ಜಾವಗಲ್ ಪೋಲೀಸ್ ಠಾಣೆಗೆ ಭೇಟಿ ನೀಡಿದ್ದೆ ಎಂದು ಹೇಳಿಕೆ ನೀಡಿದ್ದು ಅದರ ಬಗ್ಗೆ ಯಾವುದೇ ದಾಖಲಾತಿಗಳಿದ್ದರೆ ಮಾನ್ಯ ಆಯೋಗದ ಮುಂದೆ ಹಾಜರುಪಡಿಸಬಹುದು, ಬರೀ ಬಾಯಿ ಮಾತಿನಲ್ಲಿ ಸುಮಾರು ಬಾರಿ ಭೇಟಿ ನೀಡಿದ್ದೆ ಎಂದು ಹೇಳಿದರೆ ನಂಬಲು ಸಾಧ್ಯವಿಲ್ಲ.

ದಿನಾಂಕ:08/11/2015 ರಂದು ಸಂಜೆ 7–00 ಗಂಟೆಗೆ ನಾವು ಎಸ್.ಪಿ.ಸಾಹೇಬರ ಹಾಸನದ ಕಛೇರಿಗೆ ಹೋಗಿದ್ದು ಅವರನ್ನು ಕೇಳಿಕೊಂಡಾಗ ಅಲ್ಲಿಂದಲೇ ಠಾಣೆಗೆ ಪೋನ್ ಮಾಡಿ ದೂರನ್ನು ದಾಖಲಿಸುವಂತೆ ತಿಳಿಸಿದ ಮೇಲೆ ದೂರನ್ನು ಎ.ಎಸ್.ಐ ಚೆಲುವಮೂರ್ತಿ ರವರು ಸ್ವೀಕರಿಸಿ ದಾಖಲಿಸಿರುತ್ತಾರೆ ಎಂದು ಹೇಳಿಕೆ ನೀಡಿದ್ದು, ಮಾನ್ಯ ಎಸ್.ಪಿ.ಸಾಹೇಬರನ್ನು ಸಾಮಾನ್ಯವಾಗಿ ಯಾರೇ ಭೇಟಿ ಮಾಡಿದಾಗ ಎಸ್.ಪಿ. ಸಾಹೇಬರು ಅವರ ದೂರನ್ನು ಸ್ವೀಕರಿಸಿ ಅದರ ಮೇಲೆ ಷರಾ ಬರೆದು ಸಹಿ ಮಾಡಿ ಕಳುಹಿಸುತ್ತಾರೆ. ಆದರೆ ಇವರು ನೀಡಿರುವ ದೂರಿನಲ್ಲಿ ಎಸ್.ಪಿ. ಸಾಹೇಬರ ಷರಾ ಇರುವುದಿಲ್ಲ. ಎಸ್.ಪಿ. ಸಾಹೇಬರ ಬಳಿ ಹೋಗಿ ದೂರು ನೀಡಿದ್ದೆವು ಎಂದು ವಿದ್ಯಾಶ್ರೀ ರವರು ಸುಳ್ಳು ಹೇಳಿಕೆ ನೀಡುತ್ತಿದ್ದಾರೆ. ಈ ಬಗ್ಗೆ ಯಾವುದೇ ದಾಖಲೆಗಳಿದ್ದರೆ ಮಾನ್ಯ ಆಯೋಗಕ್ಕೆ ಹಾಜರುಪಡಿಸಬಹುದಾಗಿರುತ್ತದೆ.

2. ಸದರಿ ವಿದ್ಯಾಶ್ರೀ ರವರು ದೂರಿನಲ್ಲಿ ಹಾಸನದ ನರ್ಸಿಂಗ್ ಹೋಂ ನಲ್ಲಿ ದಿನಾಂಕ:18.01.1996 ರಂದು ನಾನು ಹುಟ್ಟಿದ್ದು ಎಂದು ನಮೂದಿಸಿದ್ದರೂ ಸಹ ನನ್ನ ಕೇಳದೇ ಹಾಗೂ ಜನನ ಪ್ರಮಾಣ ಪತ್ರವನ್ನು ತರಿಸಿಕೊಳ್ಳದೇ ಶಾಲೆಯಿಂದ ಜನನ ಪ್ರಮಾಣ ಪತ್ರವನ್ನು ತರಿಸಿಕೊಂಡಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದು, ಈ ಸಂಬಂಧ ತನಿಖಾ ಕಾಲದಲ್ಲಿ ಅವರು ಅಪ್ರಾಪ್ತ ವಯಸ್ಕಳೆಂಬ ಬಗ್ಗೆ ಅವರು ಸದರಿ ಖಾಸಗಿ ನರ್ಸಿಂಗ್ಹೋಂ ನಿಂದ ಅಥವಾ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದಿದ್ದ ಯಾವುದೇ ಜನನ ಪ್ರಮಾಣ ಪತ್ರವನ್ನು ತನಿಖಾ ಕಾಲದಲ್ಲಿ ನಮಗೆ ಸಲ್ಲಿಸಿರುವುದಿಲ್ಲ. ಅಥವ ಹಾಜರುಪಡಿಸಿರುವುದಿಲ್ಲ. ಅವರ ವಯಸ್ಸಿನ ಬಗ್ಗೆ ಪರಿಶೀಲಿಸಲು ನಾವು ಅವರು ವಿದ್ಯಾಬ್ಯಾಸ ಮಾಡುತ್ತಿದ್ದ ಗ್ರಾಮಾಂತರ ಪ್ರೌಢಶಾಲೆ ಅಂದ್ರಾಳು, ಅರಸಿಕೆರೆ ತಾಲ್ಲೂಕು,

ಹಾಸನ ಜಿಲ್ಲೆ ನಿಂದ ಶಾಲಾ ವರ್ಗಾವಣೆ ಪ್ರಮಾಣ ಪತ್ರ ಮತ್ತು ಶಾಲಾ ದೃಢೀಕರಣ ಪತ್ರವನ್ನು ಪಡೆದಿದ್ದು ಅದರಲ್ಲಿ ವಿದ್ಯಾಶ್ರೀ ರವರು ಘಟನೆ ನಡೆದ ದಿನಾಂಕಕ್ಕೆ 18 ವರ್ಷ ತುಂಬಿದ ವಯಸ್ಕರೆಂದು ಕಂಡು ಬಂದಿದ್ದು ಅಪ್ರಾಪ್ತೆಯಾಗಿರುವುದು ಕಂಡು ಬಂದಿರುವುದಿಲ್ಲ. ಸದರಿ ದಾಖಲೆಗಳು ವಯಸ್ಸನ್ನು ದೃಢೀಕರಿಸಲು ಮಾನ್ಯತೆ ಹೊಂದಿರುವ ದಾಖಲೆಗಳಾಗಿರುವುದರಿಂದ ಅವುಗಳನ್ನು ನಂಬಲೇ ಬೇಕಾಗಿರುತ್ತದೆ. ಶ್ರೀಮತಿ ವಿದ್ಯಾಶ್ರೀ ರವರು ನೀಡಿರುವ ಜನನ ದಿನಾಂಕವನ್ನು ಅವರೇ ಶಾಲಾ ದಾಖಲಾತಿಯ ಸಮಯದಲ್ಲಿ ನೀಡಿದ್ದಾಗಿದ್ದು, ಇದರಲ್ಲಿ ಯಾವ ದಿನಾಂಕದಂದು ಇವರು ಜನನವಾಗಿದ್ದಾರೆಂಬ ಬಗ್ಗೆ ನೈಜತೆ ಬಗ್ಗೆ ಸ್ಪಷ್ಟೀಕರಿಸಬೇಕು ಹಾಗೂ ಯಾವ ಉದ್ದೇಶದಿಂದ ಶಾಲಾ ದಾಖಲಾತಿಗಳಲ್ಲಿ ಈ ಜನನ ದಿನಾಂಕವನ್ನು ನೀಡಿದ್ದಾರೆ ಎಂದು ಸ್ಪಷ್ಟೀಕರಣ ನೀಡಬೇಕು. ಇದರಿಂದ ಇವರು ನೀಡಿರುವ ಹೇಳಿಕೆಯಲ್ಲಿ ಎಷ್ಟು ಸತ್ಯ ಮತ್ತು ನೈಜ್ಯತೆ ಎಂದು ತಿಳಿಯುತ್ತದೆ.

3. ಮಾನ್ಯ ಡಿವೈಎಸ್ಪಿ ಅರಸೀಕೆರೆ ಹಾಸನ ಜಿಲ್ಲೆ ರವರು ಅವರ ಕಚೇರಿ ಪತ್ರ ಸಂಖ್ಯೆ:ಎಸ್.ಡಿ.ಪಿ.ಓ/ಎಎಸ್‌ಕೆ/ಎಲ್.ಪೆಟ್/45/2018 ದಿನಾಂಕ.05.02.2019 ರಂದು ನೀಡಿರುವ ವರದಿಯಲ್ಲಿ ಪಿರ್ಯಾದುದಾರರು ನೀಡಿರುವ ದೂರಿಗನುಗುಣವಾಗಿ ತನಿಖೆ ನಡೆಸದೇ ಇರುವುದು ಹಾಗೂ ದೋಷಾರೋಪಣಾ ಪತ್ರದಲ್ಲಿ ಆರೋಪಿ 2 ರಿಂದ 11 ರವರನ್ನು ಕೈಬಿಟ್ಟಿರುವುದು ಹಾಗೂ ನ್ಯಾಯಾಲಯಕ್ಕೆ ದೋಷಾರೋಪಣೆ ಸಲ್ಲಿಸಿದ್ದಾರೆ ಎಂದು ತಿಳಿಸಿದ್ದು, ಮಾನ್ಯ ಡಿವೈಎಸ್ಪಿ ರವರು ಸುಮಾರು 2015–2016 ನೇ ಸಾಲಿನಲ್ಲಿ ಅರಸೀಕೆರೆ ಗ್ರಾಮಾಂತರ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಈ ಪ್ರಕರಣದ ಕಡತವನ್ನು ತನಿಖೆ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸುವ ಮುಂಚೆ ಅವರ ಕಚೇರಿಗೆ ಸಲ್ಲಿಸಿಕೊಂಡಿದ್ದು ಅವರೇ (ಶ್ರೀ ಸದಾನಂದ ತಿಪ್ಪಣ್ಣ ರವರು)ಕಡತವನ್ನು ಪರಿಶೀಲಿಸಿ ಮೇಲು ರುಜು ಮಾಡಿದ್ದು ಹಾಗೆಯೇ ಮಾನ್ಯ ಡಿವೈಎಸ್ಪಿ ರವರ ಪರಿಶೀಲನೆಗೆ ಒಳಪಡಿಸಿದ್ದು ಆ ಸಂದರ್ಭದಲ್ಲಿ ಮಾನ್ಯ ವೃತ್ತ ನಿರೀಕ್ಷಕರು ಏಕೆ ಈ ಪ್ರಕರಣದ ತನಿಖೆ ಸರಿಯಾಗಿ ಮಾಡಿಲ್ಲವೆಂದು ತಿಳಿಸಿರುವುದಿಲ್ಲ. ಅವರು 2018–19 ನೇ ಸಾಲಿನಲ್ಲಿ ಅರಸೀಕೆರೆ ಡಿವೈಎಸ್ಪಿಯಾಗಿ ವರದಿ ಮಾಡಿದ ಮೇಲೆ ಈ ರೀತಿ ವರದಿ ನೀಡಲು ಕಾರಣವನ್ನು ತಿಳಿಯಬೇಕಾಗಿದೆ. ಹಾಗೆಯೇ ಮಾನ್ಯ ಸಿಪಿಐ ಅರಸೀಕೆರೆ ಮತ್ತು ಮಾನ್ಯ ಡಿವೈಎಸ್ಪಿ ಅರಸೀಕೆರೆ ರವರಿಗೆ ಪ್ರಕರಣದ ಕಡತವನ್ನು ಸಲ್ಲಿಸಿ ಅವರ ಅನುಮತಿಯನ್ನು ಪಡೆದೆ ಪ್ರಕರಣದಲ್ಲಿ 2 ರಿಂದ 11 ರ ವರೆಗಿನ ಆರೋಪಿಗಳನ್ನು ಕೈಬಿಟ್ಟಿರುತ್ತೇನೆ.

ಮುಂದುವರೆದು ಮಾನ್ಯ ಡಿವೈಎಸ್ಪಿ ಅರಸೀಕೆರೆ ಹಾಸನ ಜಿಲ್ಲೆ ರವರು ಪತ್ರ ಸಂಖ್ಯೆ:ಎಸ್.ಡಿ.ಪಿ.ಓ/ಎಎಸ್‌ಕೆ/ಎಲ್.ಪೆಟ್/45/2018 ದಿನಾಂಕ.05.02.2019 ರಂದು ನೀಡಿರುವ ವರದಿಯನ್ನು ಮತ್ತೊಮ್ಮೆ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದ ವರದಿಯನ್ನು ಸಲ್ಲಿಸುವಂತೆ ಸೂಚಿಸಿ ದಿನಾಂಕ: 21–12–2019 ರಂದು ಮಾನ್ಯ ಪೊಲೀಸ್ ಅಧೀಕ್ಷಕರು ಹಾಸನ ಜಿಲ್ಲೆ, ಹಾಸನ ರವರು ಡಿವೈಎಸ್ಪಿ, ಅರಸೀಕೆರೆ ಉಪ ವಿಭಾಗ, ಹಾಸನ ಜಿಲ್ಲೆ ರವರಿಗೆ ವಾಪಸ್ ಕಳುಹಿಸಿಕೊಟ್ಟಿದ್ದು, ಮಾನ್ಯ ಡಿವೈಎಸ್ಪಿ ಅರಸೀಕೆರೆ ಉಪವಿಭಾಗ ರವರು ಸದರಿ ಅರ್ಜಿಯ ಬಗ್ಗೆ ಮರು ವಿಚಾರಣೆ ನಡೆಸಿದ ನಂತರ ಶ್ರೀಮತಿ ವಿದ್ಯಾಶ್ರೀ ರವರು ದಾಖಲಿಸಿರುವ ಪ್ರಕರಣದ ತನಿಖಾ ಕಾಲದಲ್ಲಿ ತನಿಖೆಯ ಸಂಬಂಧ ಪಡೆದುಕೊಂಡ ದಾಖಲಾತಿಗಳೆಲ್ಲವೂ ಕಾನೂನಿನ ವ್ಯಾಪ್ತಿಯಲ್ಲಿ ಊರ್ಜಿತವಾಗಿದ್ದು ಸದರಿ ದಾಖಲಾತಿಗಳಲ್ಲಿ ಅರ್ಜಿದಾರರಿಗೆ 18 ವರ್ಷಗಳು ತುಂಬಿರುವ ಬಗ್ಗೆ ನಿಖರವಾದ ಮಾಹಿತಿ ಇದ್ದ ಕಾರಣ ಪಿ.ಎಸ್.ಐ. ರಾಘವೇಂದ್ರ ಬಾಬು ರವರು ನಿಷ್ಪಕ್ಷಪಾತವಾಗಿ ಹಾಗೂ ಪ್ರಾಮಾಣಿಕವಾಗಿ

ತನಿಖೆ ನಡೆಸಿ ಮಾನ್ಯ ಘನ ನ್ಯಾಯಾಲಯಕ್ಕೆ ಆರೋಪ ಸಾಬೀತಾದಂತಹ ಆರೋಪಿ-1 ರವರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುವುದು ಸರಿಯಾದ ಕ್ರಮವಾಗಿರುತ್ತದೆ.

ಅರ್ಜಿದಾರರು ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳಿಗೆ ಸೂಕ್ತ ಹಾಗೂ ನಿಖರವಾದ ಮಾಹಿತಿಯನ್ನು ನೀಡಿರುವುದಿಲ್ಲ ಮತ್ತು ಅರ್ಜಿದಾರರ ಶಾಲಾವರ್ಗಾವಣೆ ಪ್ರಮಾಣ ಪತ್ರ, ಪಡಿತರಚೀಟಿ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ವಾಸಸ್ಥಳ ದೃಢೀಕರಣ ಪತ್ರ ಹಾಗೂ ನೋಟರಿ ಪ್ರಮಾಣ ಪತ್ರಗಳಲ್ಲಿ ಅರ್ಜಿದಾರರಿಗೆ 18 ವರ್ಷ ತುಂಬಿರುವುದು ಕಂಡು ಬರುತ್ತದೆ. ಆದರೆ ಅರ್ಜಿದಾರರು ತಮ್ಮ ಅಪ್ರಾಪ್ತ ವಯಸ್ಸಿನಲ್ಲಿ ತಮಗೆ ಬಲವಂತವಾಗಿ ವಿವಾಹ ಮಾಡಿಸಿರುತ್ತಾರೆ ಎಂದು ಆರೋಪಿಸಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ತಾವು ಹಾಸನದ ರಾಜೀವ್ ನರ್ಸಿಂಗ್ ಹೋಂ ಖಾಸಗಿ ಆಸ್ಪತ್ರೆಯಲ್ಲಿ ದಿನಾಂಕ: 18-01-1996 ರಲ್ಲಿ ಜನಿಸಿರುವುದಾಗಿಯೂ ವಿವಾಹದ ಸಮಯಕ್ಕೆ ತಾವು ಅಪ್ರಾಪ್ತ ವಯಸ್ಕಳೆಂದು ತಮ್ಮ ದೂರಿನ ಸಂಬಂಧ ಪೊಲೀಸರು ಕ್ರಮ ಕೈಗೊಂಡಿರುವುದಿಲ್ಲವೆಂದು ಆರೋಪಿಸಿರುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿರುತ್ತದೆ.

ಅರ್ಜಿದಾರರು ಮೇಲ್ಕಂಡ ದಾಖಲಾತಿಗಳಲ್ಲಿ 18 ವರ್ಷ ತುಂಬಿದವರಾಗಿದ್ದು, ತಾವು ಅಪ್ರಾಪ್ತ ವಯಸ್ಕಳೆಂದು ಹಿಂದಿನಿಂದಲೂ ತಿಳಿದಿದ್ದಾಗ್ಯೂ ಸಹ ತಮಗೆ 18 ವರ್ಷ ತುಂಬುವವರೆಗೂ ಮೇಲ್ಕಂಡ ಸರ್ಕಾರಿ ದಾಖಲಾತಿಗಳನ್ನು ಸರಿಪಡಿಸುವ ಪ್ರಯತ್ನ ನಡೆಸಿರುವುದಿಲ್ಲ ಎಂಬ ಪ್ರಶ್ನೆಯೂ ಅನುಮಾನಸ್ಪದವಾಗಿ ಕಂಡು ಬರುತ್ತದೆ. ತಮ್ಮ ಜನನದ ನಿಖರವಾದ ಮಾಹಿತಿಯು ತಮಗೆ ತಿಳಿದಿದ್ದಾಗ್ಯೂ ಸಹ ಸರ್ಕಾರಿ ದಾಖಲಾತಿಗಳಲ್ಲಿ ತಪ್ಪು ಮಾಹಿತಿ ಮುಂದುವರೆಯುತ್ತಿದೆ ಎಂದು ತಿಳಿಸಿದ್ದಾಗ್ಯೂ ಸಹ ಸರಿಪಡಿಸಿಕೊಳ್ಳದೇ ಇರುವುದು ಅರ್ಜಿದಾರರ ಮೂಲ ನ್ಯೂನತೆಯಾಗಿದ್ದು, ವಿನಾಕಾರಣ ಸರ್ಕಾರಿ ಪೊಲೀಸ್ ಅಧಿಕಾರಿಗಳ ವಿರುದ್ಧ ತಮ್ಮ ಅನುಕೂಲಕ್ಕಾಗಿ ವಿನಾ ಕಾರಣ ಆರೋಪ ಮಾಡಿ ಮೇಲ್ಕಂಡಂತೆ ದೂರು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಚಲುವಮೂರ್ತಿ ಎ.ಎಸ್.ಐ ಮತ್ತು ಶ್ರೀ ರಾಘವೇಂದ್ರ ಬಾಬು ಪಿ.ಎಸ್.ಐ ರವರನ್ನು ದೂರು ಅರ್ಜಿಯ ಆರೋಪಗಳಿಂದ ಮುಕ್ತಾಯಗೊಳಿಸಬಹುದಾಗಿದೆ ಎಂದು ಸ್ಪಷ್ಟ ಅಭಿಪ್ರಾಯ ವರದಿಯನ್ನು ಮಾನ್ಯ ಡಿವೈಎಸ್ಪಿ ಅರಸೀಕೆರೆ ಉಪವಿಭಾಗ ರವರು ದಿನಾಂಕ: 13-01-2020 ರಂದು ಮಾನ್ಯ ಪೊಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ರವರಿಗೆ ಸಲ್ಲಿಸಿಕೊಂಡಿರುತ್ತಾರೆ. (ವರದಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ Annexure-1 ಎಂದು ನಮೂದಿಸಿದೆ.)

4. ಶ್ರೀಮತಿ ವಿದ್ಯಾಶ್ರೀ ರವರು ಹೊಳೆ ನರಸೀಪುರ ಹಾಸ್ಟೆಲ್‌ನಲ್ಲಿ ಡಿಪ್ಲಮೋ ಓದುತ್ತಿದ್ದಾಗ ಯಾವಾಗಲು ನನ್ನ ಕಾಲೇಜು ಬ್ಯಾಗಿನಲ್ಲಿ ನನ್ನ ಎಲ್ಲಾ ಶಾಲಾ ದಾಖಲಾತಿಗಳನ್ನು ಹಾಗೂ ಆಧಾರ್‌ಕಾರ್ಡ್, ಗುರುತಿನ ಚೀಟಿ, ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ಇಟ್ಟುಕೊಳ್ಳುತ್ತಿದ್ದೆ ಹಾಗೂ ಇವುಗಳನ್ನು ಶಿವಾನಂದನು ನನ್ನ ಗಮನಕ್ಕೆ ತರದೇ ತೆಗೆದುಕೊಂಡು ವಿವಾಹ ನೊಂದಣಿ ಕಛೇರಿಗೆ ಹಾಜರುಪಡಿಸಿರುತ್ತಾನೆ ಎಂದು ತಿಳಿಸಿದ್ದು, ಇವರು ನೀಡಿರುವ ಹೇಳಿಕೆಯಂತೆ ಯಾವುದೇ ರೀತಿಯಲ್ಲಿ ಗಮನಕ್ಕೆ ಬಾರದೇ ಅವುಗಳನ್ನು ಹಾಜರುಪಡಿಸಿರುವುದಿಲ್ಲ ಇವರು ಸುಮಾರು ವರ್ಷಗಳಿಂದ ಒಬ್ಬರಿಗೊಬ್ಬರು ಪರಸ್ಪರ ಪ್ರೀತಿಸಿ ಪರಸ್ಪರ ಒಪ್ಪಿಕೊಂಡು ಶ್ರೀ ಯಡಿಯೂರು ಸಿದ್ದಲಿಂಗೇಶ್ವರ ಮಠದಲ್ಲಿ ಗುರು ಹಿರಿಯರ ಸಮ್ಮುಖದಲ್ಲಿ ಮದುವೆಯಾಗಿದ್ದು ಅದನ್ನು ಸಾಕ್ಷೀಕರಿಸಲು ಅರಸೀಕೆರೆ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಇವರ ಎಲ್ಲಾ ದಾಖಲಾತಿಗಳನ್ನು ವಿವಾಹ ನೊಂದಣಾಧಿಕಾರಿಗಳ

ಮುಂದೆ ಖುದ್ದು ಹಾಜರುಪಡಿಸಿ, ನೋಟರಿ ಹಾಗೂ ಅಫಿಡೆವಿಟ್‌ನ್ನು ಮಾಡಿಸಿ ವಿವಾಹ ನೋಂದಣಿ ಮಾಡಿಸಿರುತ್ತಾರೆಯೇ ವಿನ: ಇವರು ನೀಡಿರುವ ಹೇಳಿಕೆಯಲ್ಲಿ ಯಾವುದೇ ಸತ್ಯಾಂಶ ಇರುವುದಿಲ್ಲ.

5. ....ಸದರಿ ವಿದ್ಯಾಶ್ರೀ ಮತ್ತು ಶಿವಾನಂದ ಹಾಗೂ ಇಬ್ಬರೂ ಪರಸ್ಪರ ಒಪ್ಪಿಕೊಂಡು ಪ್ರೀತಿಸಿ ಮದುವೆಯಾಗಿರುವುದಾಗಿ ಪ್ರಕರಣದ ತನಿಖಾ ಸಮಯದಲ್ಲಿ ದೊರೆತ ದಾಖಲಾತಿಗಳು ಹಾಗೂ ಸಾಕ್ಷ್ಯಾಧಾರಗಳಿಂದ ದೃಢಪಟ್ಟಿರುತ್ತದೆ. ಶಿವಾನಂದ ಹಾಗೂ ಅವರ ಮನೆಯವರು ವಿದ್ಯಾಶ್ರೀ ರವರಿಗೆ ಮದುವೆ ಸಮಯದಲ್ಲಿ ತೆಗೆದ ಫೋಟೋಗಳು ಮತ್ತೆ ವಿಡಿಯೋಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಬಿಡುವುದಾಗಿ ಬೆದರಿಕೆ ಹಾಕಿದ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲ. ಇದ್ದಿದ್ದರೆ ಅವರು ಪ್ರಕರಣದ ತನಿಖೆ ವೇಳೆ ತನಿಖಾಧಿಕಾರಿಗಳಿಗೆ ಸಲ್ಲಿಸಬಹುದಿತ್ತು. ಅವರು ನನ್ನ ವಿರುದ್ಧ ನೀಡಿರುವ ಸುಳ್ಳು ದೂರು ಅರ್ಜಿಯಲ್ಲಿನ ಸುಳ್ಳು ಆರೋಪಗಳನ್ನು ಸಮರ್ಥನೆ ಮಾಡಿಕೊಳ್ಳಲು ಈ ರೀತಿ ಸುಳ್ಳು ಹೇಳಿಕೆ ನೀಡಿರುತ್ತಾರೆ.

7. ಶ್ರೀಮತಿ ವಿದ್ಯಾಶ್ರೀ ರವರು ಮದುವೆಯಾಗಿ ಸುಮಾರು 1 ವರ್ಷ 6 ತಿಂಗಳಾದ ನಂತರ ದೂರು ನೀಡಿರುವುದು ದೂರಿನ ಸಮಯದಲ್ಲಿ ಸಲ್ಲಿಸಿರುವ ದಾಖಲಾತಿಗಳಿಂದ ಕಂಡು ಬಂದಿರುತ್ತದೆ.

ಅರ್ಜಿದಾರರಾದ ಶ್ರೀಮತಿ ವಿದ್ಯಾಶ್ರೀ ರವರು ದಿನಾಂಕ:10.11.2015 ರಂದು ಜಾವಗಲ್ ಪೊಲೀಸ್ ಠಾಣೆಗೆ ಸಲ್ಲಿಸಿದ್ದ ದೂರಿನ ಸಂಬಂಧ ಮೊ.ಸಂ.185/2015 ಕಲಂ:341, 342, 323, 504, 506, 498(ಎ) ರೆ/ವಿ 34 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡು ತನಿಖಾ ಕಾಲದಲ್ಲಿ ದೊರೆತ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಆರೋಪ ಸಾಬೀತಾದ 1ನೇ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯಲ್ಲಿ ಸಲ್ಲಿಸಿದ್ದು, ಸಿಸಿ.ನಂ.3094/2016 ರಲ್ಲಿ ಹಾಲಿ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ.

ಮುಂದುವರಿದು ಪ್ರಕರಣದ ತನಿಖೆ ಸರಿಯಾಗಿ ಮಾಡಿರುವುದಿಲ್ಲ ಮತ್ತು ದೂರಿನಲ್ಲಿನ ಅಂಶಗಳನ್ನು ಆಧಾರಿಸಿ ಎಫ್.ಐ.ಆರ್ ದಾಖಲಿಸಿರುವುದಿಲ್ಲ ಎಂದು ಅರ್ಜಿದಾರರು ಮಾನ್ಯ ಹಾಸನ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಅರ್ಜಿ ಸಲ್ಲಿಸಿಕೊಂಡಿದ್ದು. ಸದರಿ ಅರ್ಜಿಯ ಬಗ್ಗೆ ಪೊಲೀಸ್ ಉಪ ಅಧೀಕ್ಷಕರು ಅರಸೀಕೆರೆ ಉಪವಿಭಾಗ ರವರು ಹಾಗೂ ಪೊಲೀಸ್ ಅಧೀಕ್ಷಕರು ಹಾಸನ ಜಿಲ್ಲೆ ಹಾಗೂ ಮಾನ್ಯ ಉಪ ಪೊಲೀಸ್ ಆಯುಕ್ತರು, ಈಶಾನ್ಯ ವಿಭಾಗ ಬೆಂಗಳೂರು ನಗರ ರವರು ಇಲಾಖಾ ಮಟ್ಟದಲ್ಲಿ ವಿಚಾರಣೆ/ತನಿಖೆ ನಡೆಸಿ ಪ್ರಕರಣದ ತನಿಖಾ ಕಾಲದಲ್ಲಿ ತನಿಖೆಯ ಸಂಬಂಧ ಪಡೆದುಕೊಂಡ ದಾಖಲಾತಿಗಳೆಲ್ಲವೂ ಕಾನೂನಿನ ವ್ಯಾಪ್ತಿಯಲ್ಲಿ ಊರ್ಜಿತವಾಗಿದ್ದು ಸದರಿ ದಾಖಲಾತಿಗಳಲ್ಲಿ ಅರ್ಜಿದಾರರಿಗೆ 18 ವರ್ಷಗಳು ತುಂಬಿರುವ ಬಗ್ಗೆ ನಿಖರವಾದ ಮಾಹಿತಿ ಇದ್ದ ಕಾರಣ ಪಿ.ಎಸ್.ಐ ರಾಘವೇಂದ್ರ ಬಾಬು ರವರು ನಿಷ್ಪಕ್ಷಪಾತವಾಗಿ ಹಾಗೂ ಪ್ರಾಮಾಣಿಕವಾಗಿ ತನಿಖೆ ನಡೆಸಿ ಮಾನ್ಯ ಘನ ನ್ಯಾಯಾಲಯಕ್ಕೆ ಆರೋಪ ಸಾಬೀತಾದಂತಹ ಆರೋಪಿ-1 ರವರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುವುದು ಸರಿಯಾದ ಕ್ರಮವಾಗಿರುತ್ತದೆ. ವಿದ್ಯಾಶ್ರೀ ರವರು ತಮ್ಮ ಜನನದ ನಿಖರವಾದ ಮಾಹಿತಿಯು ತಮಗೆ ತಿಳಿದಿದ್ದಾಗ್ಯೂ ಸಹ ಸರ್ಕಾರಿ ದಾಖಲಾತಿಗಳಲ್ಲಿ ತಪ್ಪು ಮಾಹಿತಿ ಮುಂದುವರಿಯುತ್ತಿದೆ ಎಂದು ತಿಳಿದಿದ್ದಾಗ್ಯೂ ಸಹ

ಸರಿಪಡಿಸಿಕೊಳ್ಳದೇ ಇರುವುದು ಅರ್ಜಿದಾರರ ಮೂಲ ನ್ಯೂನ್ಯತೆ ಯಾಗಿದ್ದು, ವಿನಾಕಾರಣ ಸರ್ಕಾರಿ ಪೊಲೀಸ್ ಅಧಿಕಾರಿಗಳ ವಿರುದ್ಧ ತಮ್ಮ ಅನುಕೂಲಕ್ಕಾಗಿ ವಿನಾ ಕಾರಣ ಆರೋಪ ಮಾಡಿ ದೂರು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಚೆಲುವಮೂರ್ತಿ ಎ.ಎಸ್.ಐ ಮತ್ತು ಶ್ರೀ ರಾಘವೇಂದ್ರ ಬಾಬು ಪಿ.ಎಸ್.ಐ ರವರನ್ನು ದೂರು ಅರ್ಜಿಯ ಆರೋಪಗಳಿಂದ ಮುಕ್ತಾಯಗೊಳಿಸ ಬಹುದಾಗಿದೆ ಎಂದು ಸ್ಪಷ್ಟ ಅಭಿಪ್ರಾಯ ವರದಿಯನ್ನು ಸಲ್ಲಿಸಿಕೊಂಡು ಅರ್ಜಿಯ ವಿಚಾರಣೆ ಮುಕ್ತಾಯ ಮಾಡಿರುವುದು ಕಂಡು ಬರುತ್ತದೆ.

ಶ್ರೀಮತಿ ವಿದ್ಯಾಶ್ರೀ ರವರು ನನ್ನ ವಿರುದ್ಧ ನೀಡಿರುವ ಸುಳ್ಳು ದೂರು ಅರ್ಜಿಯಲ್ಲಿ ಯಾವುದೇ ಸತ್ಯಾಂಶ ಇಲ್ಲದಿದ್ದರೂ ಸಹಾ ಅವರು ನನ್ನ ವಿರುದ್ಧ ಮಾಡಿರುವ ಸುಳ್ಳು ಆರೋಪಗಳನ್ನು ಸಮರ್ಥನೆ ಮಾಡಿಕೊಳ್ಳಲು ಈ ರೀತಿ ಸುಳ್ಳು ಹೇಳಿಕೆ ನೀಡಿರುತ್ತಾರೆ ಹಾಗೂ ಅರ್ಜಿದಾರರು ಈ ಒಂದೇ ವಿಷಯದ ಸಲುವಾಗಿ ಹಲವಾರು ಕಡೆಗಳಲ್ಲಿ ದೂರುಗಳನ್ನು ಸಲ್ಲಿಸಿ ವಿನಾ:ಕಾರಣ ನನಗೆ ಮಾನಸಿಕ ಕಿರುಕುಳ ನೀಡುತ್ತಿರುತ್ತಾರೆ. ಈ ಸಂಬಂಧ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಯಲ್ಲಿರುವುದರಿಂದ ಮತ್ತು ಪ್ರಕರಣದ ಮರು ತನಿಖೆಯು ಸಹ ನಡೆಯುತ್ತಿರುವುದರಿಂದ ಅದೇ ವಿಷಯದ ಸಲುವಾಗಿ ತನಿಖೆ ನಡೆಸುವುದು ಅಥವಾ ವಿಚಾರಣೆ ನಡೆಸುವುದು ಕಾನೂನು ರೀತ್ಯಾ ಸಮಂಜಸವಲ್ಲ ಹಾಗೂ ಈ ಪ್ರಕರಣದ ತನಿಖೆಯ ಲೋಪ ದೋಷಗಳ ಸಂಬಂಧ ಇಲಾಖಾ ಮಟ್ಟದಲ್ಲಿ ಮೇಲಾಧಿಕಾರಿಗಳು ತನಿಖೆ ನಡೆಸಿ ಪಿ.ಎಸ್.ಐ ರಾಘವೇಂದ್ರ ಬಾಬು ರವರು ನಿಷ್ಪಕ್ಷಪಾತವಾಗಿ ಹಾಗೂ ಪ್ರಾಮಾಣಿಕವಾಗಿ ತನಿಖೆ ನಡೆಸಿ ಮಾನ್ಯ ಘನ ನ್ಯಾಯಾಲಯಕ್ಕೆ ಆರೋಪ ಸಾಬೀತಾದಂತಹ ಆರೋಪಿ-1 ರವರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುವುದು ಸರಿಯಾದ ಕ್ರಮವಾಗಿರುತ್ತದೆ ಎಂದು ಪರಿಗಣಿಸಿರುತ್ತಾರೆ."

ಆದ್ದರಿಂದ ಸದರಿ ನನ್ನ ಸಮಜಾಯಿಷಿಯನ್ನು ಮತ್ತು ಇದರೊಂದಿಗೆ ಸಲ್ಲಿಸಿಕೊಂಡಿರುವ ದಾಖಲೆಗಳನ್ನು ಪರಿಶೀಲಿಸಿ, ಶ್ರೀಮತಿ ವಿದ್ಯಾಶ್ರೀ ರವರು ಸಲ್ಲಿಸಿಕೊಂಡಿರುವ ದೂರು ಅರ್ಜಿಯಲ್ಲಿನ ಆರೋಪಗಳಿಂದ ಬಿಡುಗಡೆ ಮಾಡಿ ಸದರಿ ದೂರು ಅರ್ಜಿಯನ್ನು ಸತ್ಯಕ್ಕೆ ದೂರವಾದ ಸುಳ್ಳು ಅರ್ಜಿ ಎಂದು ಪರಿಗಣಿಸಿ ಮುಕ್ತಾಯ ಮಾಡಬೇಕೆಂದು ಮಾನ್ಯ ಆಯೋಗದಲ್ಲಿ ಕೋರುತ್ತೇನೆ.

ತದನಂತರ ದಿನಾಂಕ.02.03.2021 ರಂದು ಶ್ರೀ ರಾಘವೇಂದ್ರ ಬಾಬು ರವರು ಆಯೋಗದ ಮುಂದೆ ಹಾಜರಾಗಿದ್ದು, ದಿನಾಂಕ.02.03.2021ರ ಪತ್ರದ ಅನ್ವಯ ವರದಿ ಸಲ್ಲಿಸಿದ್ದು, ವರದಿಯೊಂದಿಗೆ ಮೂರು ದಾಖಲೆಗಳು ಇರುತ್ತದೆ. ಸದರಿ ವರದಿಯು ಈ ಕೆಳಕಂಡಂತೆ ಇದೆ:-

"... ಶ್ರೀಮತಿ. ವಿದ್ಯಾಶ್ರೀ ರವರಿ ವ್ಯಾಸಂಗ ಮಾಡಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ, ಹಂದ್ರಾಳು, ಅರಸೀಕೆರೆ ತಾಲೋಕ್, ಹಾಸನ ಜಿಲ್ಲೆ, ರವರಿಂದ ಸದರಿಯವರ ಜನ್ಮ ದಿನಾಂಕದ ಮಾಹಿತಿಯನ್ನು ಕೇಳಲಾಗಿ ಸದರಿಯವರ ಜನ್ಮ ದಿನಾಂಕವನ್ನು ದಿ:18/06/1995 ಎಂದು ಇರುವುದನ್ನು ಮಾನ್ಯ ಉಪ ನಿರ್ದೇಶಕರು, ಹಾಸನ ಇವರ ಆದೇಶ ದಿನಾಂಕ:22/12/2020ರಂದು ವಿದ್ಯಾಶ್ರೀ.ಹೆಚ್.ಇ ಈಶ್ವರಪ್ಪ ಈ ವಿದ್ಯಾರ್ಥಿಯ ಜನ್ಮ ದಿನಾಂಕವನ್ನು 18/01/1996 ಎಂಬುದಾಗಿತಿದ್ದುಪಡಿ ಮಾಡಲಾಗಿದೆ ಎಂದು ವರದಿಯನ್ನು ನೀಡಿರುತ್ತಾರೆ,

ನಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ ರವರಿಂದ ಶ್ರೀಮತಿ.ವಿದ್ಯಾಶ್ರೀ ಎಂಬ ವಿದ್ಯಾರ್ಥಿನಿಯು 2015–16ನೇ ಸಾಲಿನ ಹಾಜರಾತಿ ವಿವರ ಕೇಳಲಾಗಿ ಸದರಿ ವಿದ್ಯಾರ್ಥಿನಿಯು ನಮ್ಮ ಸಂಸ್ಥೆಯಲ್ಲಿ ದಾಖಲಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ."

ಪ್ರಕರಣದ ಕಡತವನ್ನು ಪರಿಶೀಲಿಸಿದ ನಂತರ, ದೂರುದಾರರಾದ ವಿದ್ಯಾಶ್ರೀ ರವರು 8 ರಿಂದ 9 ಬಾರಿ ಜಾವಗಲ್ ಪೊಲೀಸ್ ಠಾಣೆಗೆ ಹೋಗಿ ಪಿ.ಎಸ್.ಐ ಆದ ಶ್ರೀ ರಾಘವೇಂದ್ರ ಬಾಬು ರವರಿಗೆ ದೂರು ದಾಖಲಿಸಿಕೊಳ್ಳಲು ಕೇಳಿಕೊಂಡರೂ ದೂರು ದಾಖಲಿಸದೇ ಇದ್ದು, ದಿನಾಂಕ.08.11.2015 ರಂದು ಮಾನ್ಯ ಎಸ್.ಪಿ., ಹಾಸನ ರವರು ಜಾವಗಲ್ ಪೊಲೀಸ್ ಠಾಣೆಗೆ ಕರೆ ಮಾಡಿ ದೂರು ದಾಖಲಿಸಿಕೊಳ್ಳುವಂತೆ ತಿಳಿಸಿದ ಮೇರೆಗೆ ದಿನಾಂಕ.10.11.2015 ರಂದು ಶ್ರೀ ಚಲುವಮೂರ್ತಿ, ಎ.ಎಸ್.ಐ ರವರು ದೂರನ್ನು ದಾಖಲಿಸಿಕೊಂಡಿರುವುದು ದೂರುದಾರರ ಹೇಳಿಕೆಯುಲ್ಲಿ ಕಂಡು ಬರುತ್ತದೆ.

ದೂರುದಾರರಾದ ವಿದ್ಯಾಶ್ರೀ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯಲ್ಲಿ ಶ್ರೀ ಶಿವಾನಂದ್ ರವರ ಜೊತೆ ವಿದ್ಯಾಶ್ರೀ ರವರ ಮದುವೆಯು ಬಲವಂತವಾಗಿ ಆಗಿರುತ್ತದೆಂದು ಜಾವಗಲ್ ಪೊಲೀಸ್ ಠಾಣೆಯ ಪಿ.ಎಸ್.ಐ ರವರಾದ ಶ್ರೀ ರಾಘವೇಂದ್ರ ಬಾಬು ರವರಿಗೆ ವಿವರಸಿರುತ್ತಾರೆಂದು ಹೇಳಿರುತ್ತಾರೆ. ಆದರೆ ಪಿ.ಎಸ್.ಐ ರಾಘವೇಂದ್ರ ಬಾಬು ಈ ನಿಟ್ಟಿನಲ್ಲಿ ಪ್ರಕರಣ ದಾಖಲಿಸಲು ಯಾವುದೇ ಒಲವು ತೋರಿಸಿರುವುದಿಲ್ಲ. ತದನಂತರ, ದೂರುದಾರರು 15 ರಿಂದ 20 ದಿನಗಳ ವರೆಗೂ ನಿರಂತರವಾಗಿ ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿ ಬಂದು ಮಾಡುತ್ತಿರುತ್ತಾರೆ. ಆದರೆ ಶ್ರೀ ರಾಘವೇಂದ್ರ ಬಾಬು ರವರು ಪ್ರಕರಣವನ್ನು ದಾಖಲಿಸಿಕೊಂಡಿರುವುದಿಲ್ಲ. ವಿದ್ಯಾಶ್ರೀ ರವರನ್ನು ಜಾವಗಲ್ ಪೊಲೀಸ್ ಠಾಣೆಯಲ್ಲಿ ಸಂಜೆ 7.00 ಗಂಟೆಯವರೆಗೂ ಕುಳಿತುಕೊಂಡಿರುವಂತೆ ಮಾಡಿರುತ್ತಾರೆ. ಕೆಲವೊಂದು ದಿನಗಳಲ್ಲಿ ರಾತ್ರಿ 9.00 ಗಂಟೆಯವರೆಗೂ ಕುಳಿತುಕೊಳ್ಳುವಂತೆ ಮಾಡಿರುತ್ತಾರೆ. ಆದರೆ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ರವರು ವಿದ್ಯಾಶ್ರೀ ರವರ ದೂರಿನ ಮನವಿಗೆ ಪ್ರತಿಕ್ರಯಿಸಲಿಲ್ಲ. ನಂತರ ವಿದ್ಯಾಶ್ರೀರವರು ಹಾಸನ ಪೊಲೀಸ್ ಅಧೀಕ್ಷಕರನ್ನು ಭೇಟಿ ಮಾಡಿದ್ದು, ವಿದ್ಯಾಶ್ರೀ ರವರ ಸಮ್ಮುಖದಲ್ಲಿ ಪೊಲೀಸ್ ಅಧೀಕ್ಷಕರು ಸಬ್‌ಇನ್ಸ್‌ಪೆಕ್ಟರ್ ರವರಿಗೆ ದೂರವಾಣಿಯ ಮೂಲಕ ಕರೆ ಮಾಡಿ ವಿದ್ಯಾಶ್ರೀ ರವರಿಗೆ ಅನ್ಯಾಯವಾಗಿದ್ದರೆ, ದೂರನ್ನು ಸ್ವೀಕರಿಸಿ, ಪ್ರಕರಣವನ್ನು ದಾಖಲಿಸಿಕೊಳ್ಳುವಂತೆ ಹೇಳಿರುತ್ತಾರೆ. ಹಾಗಾಗಿ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ದೂರನ್ನು ಸ್ವೀಕರಿಸಿ ಎಫ್.ಐ.ಆರ್ ನ್ನು ದಾಖಲಿಸಿರುತ್ತಾರೆ.

ದೂರುದಾರರಾದ ವಿದ್ಯಾಶ್ರೀ ರವರು ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ರವರಿಗೆ ತನ್ನನ್ನು ಬಲವಂತವಾಗಿ ಮದುವೆಯಾದಾಗ, ತಾನು ಅಪ್ರಾಪ್ತ ವಯಸ್ಕಳೆಂದು ಪದೆ ಪದೇ ಹೇಳಿದ್ದರೂ ಸಹ ನನ್ನ

ಮನವಿಯನ್ನು ಅವರು ಪರಿಗಣಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು ವಿದ್ಯಾಶ್ರೀ ರವರು ಕಲಂ 498ಎ ಕುರಿತು ನಾನು ಏನನ್ನೂ ಹೇಳಿರುವುದಿಲ್ಲ, ಆದರೆ ಐಪಿಸಿ ಕಲಂ 498ಎ ಅಡಿಯಲ್ಲಿ ಎಫ್.ಐ.ಆರ್ ನೋಂದಾಯಿಸಲಾಗಿರುತ್ತದೆ ಹಾಗೂ ಈ ಪ್ರಕರಣದಲ್ಲಿ ತನಿಖೆ ಸರಿಯಾಗಿ ನಡೆಸಿರುವುದಿಲ್ಲವೆಂದು ಹೇಳಿರುತ್ತಾರೆ.

ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ರವರು ಅವರ ಹೇಳಿಕೆಯಲ್ಲಿ ವಿದ್ಯಾಶ್ರೀ ರವರ ದೂರನ್ನು 15 ದಿನಗಳವರೆಗೆ ಪರಿಗಣಿಸಲಿಲ್ಲವೆಂಬುದ್ದನ್ನು ನಿರಾಕರಿಸಿರುತ್ತಾರೆ. ಮುಂದುವರೆದು ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬುರವರು ಅವರ ಹೇಳಿಕೆಯಲ್ಲಿ ಶ್ರೀ ಶಿವಾನಂದ್ ಮತ್ತು ವಿದ್ಯಾಶ್ರೀ ರವರು ಒಬ್ಬರಿಗೊಬ್ಬರು ಪರಿಚಿತರು ಹಾಗೂ ಪರಸ್ಪರ ಪ್ರೀತಿಸುತ್ತಿದ್ದರು ಹಾಗೂ ಹಿರಿಯರ ಸಮ್ಮುಖದಲ್ಲಿ ವಿವಾಹವಾಗಿರುತ್ತಾರೆಂದು ಹೇಳಿರುತ್ತಾರೆ. ಹಾಗೂ ಠಾಣಾ ಮೊ.ಸಂಖ್ಯೆ.185/2015 ರಲ್ಲಿ ಸರಿಯಾಗಿ ತನಿಖೆಯನ್ನು ನಡೆಸಲಾಗಿದ್ದು, ಅಂತಿಮ ವರದಿ/ಚಾರ್ಜ್‌ಶೀಟ್ ಅನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ ಹೇಳಿರುತ್ತಾರೆ.

ದೂರುದಾರರಾದ ವಿದ್ಯಾಶ್ರೀ ರವರು ಆಕೆಯ ಜನ್ಮ ದಿನಾಂಕ.18.01.1996 ಎಂದು ರಾಜೀವ್ ನರ್ಸಿಂಗ್ ಹೋಂನಲ್ಲಿರುವ ಹುಟ್ಟಿರುವ ಜನ್ಮ ದಿನಾಂಕದ ಬಗ್ಗೆ ದಾಖಲೆಯನ್ನು ದೂರಿನೊಂದಿಗೆ ನೀಡಿದ್ದು, ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ರವರು ನಾನು ನೀಡಿರುವ ದಾಖಲೆಯನ್ನು ಪರಿಗಣಿಸದೇ, ನನ್ನ ಶಾಲಾ ದಾಖಲಾತಿಯನ್ನು ಏಕೆ ತರಿಸಿಕೊಂಡಿರುತ್ತಾರೆ ಎಂದು ಪ್ರಶ್ನಿಸಿದ್ದಾರೆ. ಮುಂದುವರೆದು ವಿದ್ಯಾಶ್ರೀ ರವರು ರಾಜೀವ್ ನರ್ಸಿಂಗ್ ಹೋಂನ ದಾಖಲೆಯಲ್ಲಿ ತನ್ನ ಹುಟ್ಟಿದ ಜನ್ಮ ದಿನಾಂಕದ ಪ್ರಕಾರ ತಾನು ಚಿಕ್ಕವಳಾಗಿದ್ದರೂ ಮದುವೆಯ ಸಮಯದಲ್ಲಿ ತಾನು ಮೇಜರ್ ಎಂದು ಉದ್ದೇಶಪೂರ್ವಕವಾಗಿ ತೋರಿಸಿರುತ್ತಾರೆಂದು ವಿದ್ಯಾಶ್ರೀ ರವರು ಹೇಳಿರುತ್ತಾರೆ.

ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ಅವರ ಲಿಖಿತ ಸಮಜಾಯಿಷಿಯಲ್ಲಿ ಠಾಣಾ ಮೊ.ಸಂಖ್ಯೆ. 185/2015 ರ ತನಿಖೆಯನ್ನು ಸಿ.ಪಿ.ಐ ಹಾಗೂ ಡಿವೈ. ಎಸ್.ಪಿ ಅರಸೀಕೆರೆ ರವರುಗಳು ನೋಡಿದ್ದರೂ ಸಹ ವಿದ್ಯಾಶ್ರೀ ರವರು ಅಪ್ರಾಪ್ತ ವಯಸ್ಕಳೆಂಬ ಅಂಶವನ್ನು ಪ್ರಶ್ನಿಸಿಲ್ಲ.

ಮೇಲೆ ಹೇಳಲಾದ ಅಂಶಗಳಿಂದ ಕಂಡು ಬರುವುದೇನೆಂದರೆ ದೂರುದಾರರಾದ ವಿದ್ಯಾಶ್ರೀ ರವರ ದೂರನ್ನು ದಾಖಲಿಸಲು ವಿಳಂಬವಾಗಿರುವುದು ಹಾಗೂ ಅವರ ದೂರಿನನ್ವಯ ಪ್ರಕರಣವನ್ನು ದಾಖಲು

ಮಾಡಿಕೊಂಡಿರುವುದಿಲ್ಲ ಮತ್ತು ವಿದ್ಯಾಶ್ರೀ ರವರು ನೀಡಿದ ರಾಜೀವ್ ನರ್ಸಿಂಗ್ ಹೋಂನಲ್ಲಿ ದಾಖಲಾಗಿದ್ದ ಜನ್ಮ ದಿನಾಂಕದ ದಾಖಲಾತಿಯನ್ನು ಪರಿಗಣಿಸದೇ, ಶಾಲಾ ದಾಖಲಾತಿಯಲ್ಲಿರುವ ಜನ್ಮ ದಿನಾಂಕವನ್ನು ಉದ್ದೇಶಪೂರ್ವಕವಾಗಿ ಪರಿಗಣಿಸಿರುತ್ತಾರೆ.

ದೂರುದಾರರ ದೂರಿನನ್ವಯ ಎಫ್.ಐ.ಆರ್‌ನಲ್ಲಿ ಅವರು ಅಪ್ರಾಪ್ತ ವಯಸ್ಕಳಾಗಿದ್ದ ಬಗ್ಗೆ ಗಮನಿಸದೇ ಕಲಂ 498ಎ ಐಪಿಸಿ ರೀತ್ಯ ದಾಖಲಿಸಿದ್ದು, ಹಾಗೂ ತನಿಖೆಯನ್ನು ಸರಿಯಾಗಿ ಮಾಡದೇ ಆರೋಪವನ್ನು ಈ ಆಯೋಗದಲ್ಲಿ ವಿಚಾರಣೆಗೆ ತೆಗೆದುಕೊಳ್ಳುವುದು ಸರಿಯಲ್ಲ, ಕಾರಣ ಈಗಾಗಲೇ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿರುವುದರಿಂದ, ಈ ಬಗ್ಗೆ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ದೂರುದಾರರಿಗೆ ಸೂಚಿಸುವುದು.

ಮುಂದುವರೆದು, ಮೇಲೆ ಹೇಳಲಾದ ವಿಳಂಬ ಹಾಗೂ ಅಪ್ರಾಪ್ತ ವಯಸ್ಕಳ ವಯಸ್ಸಿನ ಬಗ್ಗೆ ದೂರುದಾರರಾದ ವಿದ್ಯಾಶ್ರೀ ರವರು ಶ್ರೀ ರಾಘವೇಂದ್ರ ಬಾಬು ರವರಿಗೆ ಮನವಿ ಮಾಡಿದ ಸಂಗತಿಗಳಿಂದ ವಿದ್ಯಾಶ್ರೀ ರವರು ಮಾನಸಿಕ ಕಿರುಕುಳವನ್ನು ಅನುಭವಿಸಿದ್ದು ಇದು ಮಾನವ ಹಕ್ಕುಗಳ ಉಲ್ಲಂಘನೆಯಾಗಿರುತ್ತದೆ. ಆದುದರಿಂದ ಅಂದಿನ ಜಾವಗಲ್ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ರಾಘವೇಂದ್ರ ಬಾಬು ಹಾಲಿ ಪೊಲೀಸ್ ಇನ್ಸ್‌ಪೆಕ್ಟರ್, ಎ.ಸಿ.ಬಿ, ಬೆಂಗಳೂರು ರವರ ಮೇಲೆ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ದಂಡ ವಿಧಿಸುವಂತೆ ಕರ್ನಾಟಕ ಸರ್ಕಾರದ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ(ಪ್ರಕ್ರಿಯೆ) ನಿಯಮಾವಳಿ 2020 ರಂತೆ

ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ: 16–10–2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.